
ಕಲ್ಯಾಣ ಕಿರಣ

ಜುಲೈ-೨೦೦೭

ಬೆಲೆ-೬.೦೦





ನವದೆಹಲಿಯ ಬಸವ ಮಂಟಪದಲ್ಲಿ ದಿ.30ರಂದು ನಡೆದ ಪೂಜ್ಯ ಅಪ್ಪಾಜಿಯವರ
12ನೆಯ ಲಿಂಗೈಕ್ಯ ಸಂಸ್ಮರಣೆ ಕಾರ್ಯಕ್ರಮ



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-37 | ಬಸವ ಶಕೆ-874 | ಆಜೀವ ಸದಸ್ಯತ್ವ 600 ರೂ.
ಸಂಚಿಕೆ-2 | ಜುಲೈ-2007 | ವಾರ್ಷಿಕ ಚಂದಾ 60/- ರೂ.

ಅವತಾರ ಪುರುಷ ಬಸವಣ್ಣ

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಮಿಕ್ಕು ಅವರಿಗೆ ಲೆಕ್ಕಕ್ಕೆ ಕಡೆಯಿಲ್ಲದೆ ಮಾಡಿ,
ಹೊಕ್ಕು ಭಕ್ತಿಯಲ್ಲಿ, ಲೆಕ್ಕ ತಪ್ಪದೆ ಅವತಾರದಲ್ಲಿ ಬಂದು,
ಮರ್ತ್ಯಕ್ಕೆ ಬಸವೇಶ್ವರನೆಂಬ ಗಣನಾಥ ನಾಮಮಂ ಪಡೆದು,
ಭಕ್ತರಿಗೆ ಮುಖ್ಯವಾಗಿ ಭಕ್ತಿಯಂ ತೋರಿ,
ಸತ್ಯದ ಬಟ್ಟೆಯಂ ಕಾಣದ, ಚಿದ್ಘನಲಿಂಗವ ಹೊಗಲರಿಯದ,
ಬದ್ಧಕತನವನು ಸುಬದ್ಧವ ಮಾಡದೆ,
ಶುದ್ಧಶೈವ ಕಪ್ಪಡಿಯ ಸಂಗಮನಾಥನಲ್ಲಿ,
ಐಕ್ಯವಾದ ಚಿದ್ರೂಪ ಚಿತ್ಪ್ರಕಾಶ ಘನಲಿಂಗ,
ಕೈಯಲ್ಲಿದ್ದಂತೆ ಹೊದ್ದಿದನೇಕ ರುದ್ರಮೂರ್ತಿಯಲ್ಲಿ,
ರಜತಾದ್ರಿಯಲ್ಲಿರ್ದು ಸುಬದ್ಧವಾಗಿ ಪ್ರಳಯವಾಗಿತ್ತು ರುದ್ರಲೋಕವೆಲ್ಲಾ,
ರುದ್ರಗಣಂಗಳೆಲ್ಲರೂ ಮರ್ದನಂಗೆಯ್ದಲ್ಲಿ,
ಸುದ್ದಿಯ ಹೇಳುವರನಾರನೂ ಕಾಣೆ.
ಇನ್ನಿದ್ದವರಿಗೆ ಬುದ್ಧಿ ಇನ್ನಾವುದೊ ?
ಶುದ್ಧ ಶೈವವ ಬೊದ್ದದೆ, ಪೂರ್ವ ಶೈವವನಾಚರಿಸದೆ,
ಮಾರ್ಗ ಶೈವವ ಮನ್ನಣೆಯ ಮಾಡದೆ, ವೀರಶೈವವನಾರಾಧಿಸದೆ,
ಆದಿ ಶೈವವನನುಕರಿಸದೆ,
ಭೇದಿಸಬಾರದ ಲಿಂಗ ಕರದಲ್ಲಿದ್ದು,
ಕಂಗಳಿನಲ್ಲಿ ನಿಂದು, ಮನದಲ್ಲಿ ಸಿಂಹಾಸನಂಗೆಯ್ದು,
ಸಕಲೇಂದ್ರಿಯವ ಮರೆದು,
ಕಾಯಜೀವನ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ,
ಬೇರೊಂದರಸಲಿಲ್ಲವಾಗಿ ಬಯಕೆಯರತು,
ಭವ ಹಿಂಗೆ ತಾನೆನ್ನದೆ ಇದಿರೆನ್ನದೆ, ಏನೂ ಎನ್ನದ ಲಿಂಗೈಕ್ಯಂಗೆ
ಸ್ವಾನುಭಾವದಿಂದ ನಮೋ ನಮೋ ಎಂಬೆ ನಿಃಕಳಂಕ ಮಲ್ಲಿಕಾರ್ಜುನಾ.

ಗುರು ನಿಷ್ಠೆ ಲಿಂಗ ನಿಷ್ಠೆ ಜಂಗಮ ನಿಷ್ಠೆ
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗಲಿಂಗ ನಿಷ್ಠೆ
ವೀರ ಧೀರಂಗಲ್ಲದಾಗದು
ಇದು ಸಂಗನ ಬಸವಣ್ಣನಿಂದ ಬಂದ ಸಂತತಿಗಲ್ಲದಾಗದು
ಬ್ರಹ್ಮೇಶ್ವರ ಲಿಂಗವನರಿವುದಕ್ಕೆ
ತ್ರಿಗುಣ ಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ.

-ಬಾಹೂರ ಬೊಮ್ಮಣ್ಣ ಸಂ.ವ.ನಂ. 3/268

★ ಕಲ್ಯಾಣ ಕಿರಣ ★

ಕಿರಣ ಗನ್ನಡಿ

ಜುಲೈ 25ರಂದು ಬೆಂಗಳೂರು ಚಲೋ

ಬಂಜಗೆರೆ ಜಯಪ್ರಕಾಶ್ ಬರೆದಿರುವ ಕೃತಿ "**ಆನು ದೇವಾ ಹೊರಗಣವನು**"
ಇದರ ನಿಷೇಧಕ್ಕೆ ಆಗ್ರಹಿಸಿ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಲು ಕರೆ
ಬೆಂಗಳೂರು ಚಲೋ-ಜುಲೈ 25ರ ಬೃಹತ್ ರ್‍ಯಾಲಿಯ ವಿವರಗಳಿಗಾಗಿ ಪುಟ 22-23 ನೋಡಿರಿ

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10, Printed by M/S Padmashri Printres.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಧಾರ್ಮಿಕರು ತೀವ್ರವಾದಿಗಳಾಗಲು ಕಾರಣರಾರು ?

– ಮಾತಾಜಿ

ಕೆಲವರು ತಾವು ವಿಚಾರವಾದಿಗಳೆಂದು, ಜಾತ್ಯತೀತರೆಂದು ಭಾವಿಸುತ್ತ ಧರ್ಮವನ್ನು, ಧಾರ್ಮಿಕ ನಂಬಿಕೆಗಳನ್ನು ಅಪಹಾಸ್ಯ ಮಾಡುತ್ತ ಹೋಗುವುದಲ್ಲದೆ ಭಕ್ತಿವಂತರ ಶ್ರದ್ಧಾಕೇಂದ್ರಗಳಾದ ಮಹಾತ್ಮರನ್ನು ಸಹ ವಿಡಂಬಿಸುತ್ತ ಸಂಶೋಧನೆಯ ನೆಪದಲ್ಲಿ ಊಹಾತ್ಮಕವಾಗಿ ಮನಸ್ವೇಚ್ಛೆಯಾಗಿ ಬರೆಯುತ್ತಾ ಹೋಗುತ್ತಾರೆ. ತನ್ನ ಪಾಡಿಗೆ ತಾನು ಕಾಯಕ ಮಗ್ನವಾಗಿ ಸಾಗುವ ಇರುವೆ ಸಹ ತನ್ನ ಮೇಲೆ ಕಾಲಿಡುತ್ತಲೇ ಅಂಥ ಕಾಲನ್ನು ಕಚ್ಚುತ್ತದೆ. ಇದು ಆಕ್ರಮಣ ದೃಷ್ಟಿಯಿಂದಲ್ಲ ಆತ್ಮ ರಕ್ಷಣೆಯ ದೃಷ್ಟಿಯಿಂದ. ಅದೇ ರೀತಿ ಜಗತ್ತಿನ ಎಲ್ಲ ಧರ್ಮಗಳ ಅಧ್ಯಾತ್ಮ ಜೀವಿಗಳು ತಮ್ಮ ಪಾಡಿಗೆ ತಾವು ಪಾರಮಾರ್ಥ ಸಾಧನೆಯಲ್ಲಿ ಸಾಗುತ್ತಿರುತ್ತಾರೆ. ಆದರೆ ವಿಚಾರವಾದಿಗಳೆಂದು ಬೀಗುವ ಕೆಲವರು ಅಗ್ಗದ ಪ್ರಚಾರ ಪಡೆಯಲೆಂದೋ ಅಥವಾ ಹಣ ಮಾಡಲೆಂದೋ ವಿಚಿತ್ರವಾದ ಊಹೆಗಳನ್ನು ಮಹಾತ್ಮರ ಬಗ್ಗೆ ಹರಿಯಬಿಡುತ್ತಾರೆ. ಉದಾಹರಣೆಗೆ ಮಹಾಜ್ಞಾನಿ ಬುದ್ಧನನ್ನು ವೈರಾಗ್ಯದಿಂದ ಗೃಹತ್ಯಾಗ ಮಾಡಲಿಲ್ಲ,ದೇಶ ಭ್ರಷ್ಟನಾಗಿ ಕಾಡಿಗೆ ಹೋದ ಎನ್ನುವುದು; ಏಸುಕ್ರಿಸ್ತರಿಗೆ ಹೆಂಡತಿ ಮಕ್ಕಳಿದ್ದರು ಎಂದು ಬರೆಯುವುದು, ಚಲನ ಚಿತ್ರ ತೆಗೆಯುವುದು. ಇಂತಹ ಕುಟಿಲ ತಂತ್ರಗಳಿಂದ ಸಾತ್ವಿಕರಿದ್ದರೂ ಶ್ರದ್ಧಾವಂತರು ಆಕ್ರೋಶಗೊಳ್ಳುವರು; ತೀವ್ರ ಪ್ರತಿಕ್ರಿಯೆ ನೀಡುವರು. ಆಗ, ವಿಚಾರವಾದಿಗಳ ಸೋಗು ಹಾಕಿದ ನಾಸ್ತಿಕರು ಧಾರ್ಮಿಕರನ್ನು ಮೂಲಭೂತವಾದಿಗಳೆಂದು ಹಂಗಿಸುವರು. ಈ ಹಿನ್ನೆಲೆಯಲ್ಲಿ ನೋಡಿದಾಗ ಮೂಲಭೂತವಾದಿಗಳನ್ನು ಸೃಷ್ಟಿಸುವವರು ಸ್ವಯಂ ಘೋಷಿತ ಬುದ್ಧಿ ಜೀವಿಗಳೇ ಎನ್ನಿಸದೆ ಇರದು.

ಬಂಜಗೆರೆ ಜಯಪ್ರಕಾಶರ ಕೃತಿ "**ಆನು ದೇವಾ ಹೊರಗಣವನು** " ಇದರಲ್ಲಿ ವಚನಗಳಿಗೆಲ್ಲ ಅಪಾರ್ಥ ಮಾಡಿ, ವಿರುದ್ಧಾರ್ಥಗಳನ್ನು ಕಲ್ಪಿಸಲಾಗಿದೆ. ಸಂಶೋಧನೆಯಲ್ಲಿ ಖಚಿತತೆ ಇರುತ್ತದೆ. ಆದರೆ ಪ್ರಸ್ತುತ ಕೃತಿಯಲ್ಲಿ ಸಂಭಾವ್ಯ ಸತ್ಯ ಎಂದು ಅಲ್ಲಸಲ್ಲದ ಕಲ್ಪನೆಗಳನ್ನು ಮಾಡುತ್ತ ದಾರಿಯುದ್ದಕ್ಕೂ ಕೆಸರನ್ನು ಎರಚುತ್ತ ಭಾವಶೂನ್ಯನಾಗಿ ಸಾಗುವ ಒಬ್ಬ ಹುಚ್ಚನ ಕಲಾಪ ಲೇಖಕರಲ್ಲಿ ಕಾಣಬರುತ್ತಿದೆ. ಬಸವಣ್ಣನವರನ್ನು ಕೇವಲ ಒಬ್ಬ ಸಮಾಜ ಸುಧಾರಕರೆಂದು, ಸಾಹಿತಿ ಎಂದು ತಿಳಿಯದೆ ಪೂಜ್ಯರೆಂದು, ತಮ್ಮ ಶ್ರದ್ಧಾಕೇಂದ್ರವೆಂದು ಅಸಂಖ್ಯಾತರು ಆರಾಧಿಸುವವರಿಗೆ ಇದರಿಂದ ನೋವಾಗದೆ ಇರುತ್ತದೆಯೋ? ಕೆಲವರೇನೋ ಗುರು ನಿಂದೆಯನ್ನು ಕಂಡು ಅತ್ತು ಸುಮ್ಮನಾಗಬಹುದು. ಆದರೆ ತರುಣ ವಯಸ್ಸಿನವರಿಗೆ ಆಕ್ರೋಶ ಉಂಟಾಗದೆ? ಸಾಹಿತಿಗಳು ತಮ್ಮ ಕೈಯಲ್ಲಿ ಲೇಖನಿ ಇದೆ ಎಂದು ಮನಸೋ ಇಚ್ಛೆ ಬರೆಯುವುದು ಸಭ್ಯತೆಯಲ್ಲ. ಧಾರ್ಮಿಕ ಭಾವನೆಗಳನ್ನು ನೋಯಿಸಲು ಸಾಹಿತಿಗಳಿಗೆ ಹಕ್ಕೇನಿದೆ? ಸರ್ಕಾರ ಜನರ ಪ್ರಾತಿನಿಧಿಕ ಸಂಸ್ಥೆ, ಅತ್ಯಂತ ಶಾಂತಿ ಪ್ರಿಯರಾದ ಸದ್ಭಕ್ತರನ್ನು ಪ್ರಚೋದಿಸುವ ಸಾಹಿತ್ಯ ಕೃತಿಯನ್ನು ನಿಷೇಧಿಸಬೇಕಾದುದು ಅದರ ಕರ್ತವ್ಯ. ವಿಳಂಬ ನೀತಿಯನ್ನು ಅನುಸರಿಸುತ್ತ ಪ್ರತಿಭಟನೆ, ಚಳುವಳಿಗಳಿಗೆ ಪ್ರೇರಣೆ ನೀಡುವುದು ಕರ್ತವ್ಯ ಚ್ಯುತಿಯಾಗುವುದು ಮಾತ್ರವಲ್ಲ ಅದರಿಂದ ಸಮಯ, ಶಕ್ತಿ, ಹಣ ಎಲ್ಲವೂ ಅಪವ್ಯಯವಾಗುವುವು ಎಂಬುದನ್ನು ಅರಿತು, ಆನು ದೇವಾ ಪುಸ್ತಕವನ್ನು ನಿಷೇಧಿಸುವುದು ಬೇಗನೆ ವಿವೇಕಯುಕ್ತ.

ಆನು ದೇವಾ ಪುಸ್ತಕ ನಿಷೇಧದ ಸಲುವಾಗಿ ಸಲ್ಲಿಸಿದ ಮನವಿ ಪತ್ರ

ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು

ಬೆಂಗಳೂರು
5-7-2007

ಮಾನ್ಯರೇ,

ವಿಷಯ: ಬಂಜಗೆರೆ ಪುಸ್ತಕ "ಆನು ದೇವಾ ಹೊರಗಣವನು" ನಿಷೇಧಿಸಲು ಆಗ್ರಹ

ಬಂಜಗೆರೆ ಜಯಪ್ರಕಾಶ್ ಎಂಬ ಲೇಖಕರು, ಸಂಶೋಧನೆಯ ಸೋಗಿನಲ್ಲಿ ವಿಶ್ವಗುರು ಬಸವಣ್ಣನವರ ಚರಿತ್ರೆ ಮತ್ತು ಚಾರಿತ್ರ್ಯ ವಧೆ ಮಾಡುವ **"ಆನು ದೇವಾ ಹೊರಗಣವನು"** ಎಂಬ ಕೆಟ್ಟ ಪುಸ್ತಕವೊಂದನ್ನು ಬರೆದು, ಪ್ರಕಟಿಸಿದ್ದು ಇದು ಇತಿಹಾಸಕ್ಕೆ ಸಂಪೂರ್ಣ ಅಪಚಾರ ಮಾಡುವ ಕೃತಿಯಾಗಿದೆ. ವಿಶ್ವಗುರು ಬಸವಣ್ಣನವರು ಹುಟ್ಟಿನಿಂದ ವಿಪ್ರಕುಲದವರೆಂಬುದು ಕಾವ್ಯ-ಪುರಾಣ, ವಚನಗಳ ಮೂಲಕ ಸಂದೇಹವಿಲ್ಲದೆ ಸಿದ್ಧವಾಗಿದ್ದು, ಈಗ ಬಂಜಗೆರೆ ಯಾವುದೇ ಆಧಾರವಿಲ್ಲದೆ, ಮತ್ತು ದಲಿತರ ಮೇಲಿನ ಅನುಕಂಪದಿಂದ ಬಸವಣ್ಣನವರು ನುಡಿದ ಮಾನವೀಯ ಕಳಕಳಿಯುಳ್ಳ ವಚನಗಳನ್ನು ತಪ್ಪುತಪ್ಪಾಗಿ ಅರ್ಥೈಸಿ ಅವರು ಜನ್ಮತಃ ಮಾದಿಗರೆಂದು ಪ್ರತಿಪಾದಿಸಿದ್ದಾರೆ. ಇದಕ್ಕಿಂತಲೂ ಮುಖ್ಯವಾಗಿ ಮನಸ್ಸನ್ನು ಘಾಸಿಗೊಳಿಸುವ ಸಂಗತಿ ಎಂದರೆ ಬಸವಣ್ಣನವರ ತಂದೆ ಅನೈತಿಕವಾಗಿ ಕೀಳು ಜಾತಿಯ ಮಹಿಳೆಯರ ಸಂಸರ್ಗದಿಂದ ಮಕ್ಕಳನ್ನು ಹೆತ್ತನೆಂದು, ಮತ್ತೊಂದು ಕಡೆ ಬಸವಣ್ಣ ಮತ್ತು ಅಕ್ಕನಾಗಲಾಂಬಿಕೆಯನ್ನು ಗಂಡು ಬಸವಿ, ಹೆಣ್ಣು ಬಸವಿಯನ್ನಾಗಿ ಅರ್ಥಾತ್ ದೇವದಾಸಿಯರನ್ನಾಗಿ ಬಿಡಲಾಗಿತ್ತೆಂದು ಹೇಳಿದ್ದಾರೆ. ಉಲ್ಲೇಖಿಸಲು ಅಸಾಧ್ಯವಾದ ಅಸಭ್ಯ ವಿಚಾರಗಳು ಸಹ ಪುಸ್ತಕದಲ್ಲಿ ತುಂಬಿವೆ. ಅಸಂಖ್ಯಾತರ ಆರಾಧ್ಯ ಗುರುವಾದ ಬಸವಣ್ಣನವರ ಬಗ್ಗೆ, ವೀರ ಮಾತೆ ಅಕ್ಕನಾಗಲಾಂಬಿಕೆಯ ಬಗ್ಗೆ ಅಲ್ಲಸಲ್ಲದನ್ನು ಒಳಗೊಂಡಿರುವ ವಿಕೃತ ಮನಸ್ಸಿನ ಸಂಶೋಧಕ ಬಂಜಗೆರೆಯ ಕೃತಿ **"ಆನು ದೇವಾ ಹೊರಗಣವನು"** ಇಂದು ಅಸಂಖ್ಯಾತ ಜನರ ಧಾರ್ಮಿಕ ಭಾವನೆ ಮತ್ತು ನಂಬಿಕೆಗಳಿಗೆ ಘಾಸಿ ಮಾಡಿದೆ. ಲಿಂಗಾಯತರು ಮತ್ತು ದಲಿತರ ಮಧ್ಯೆ ಸಂಘರ್ಷವನ್ನು ಸಹ ಹುಟ್ಟು ಹಾಕುತ್ತಿದೆ.

ಹಿಂದೆ ಶೈವಾಗಮಾಚಾರ್ಯರು ವಾಮಾಚಾರಿಗಳಾಗಿ ಕೀಳು ಜಾತಿಯ ಹೆಂಗಸರಾದ ಡೊಂಬಿನಿ, ಮಾತಂಗಿನಿ, ರಜಕಿನಿ ಅವರ ಸಂಗದಿಂದ ಮಕ್ಕಳನ್ನು ಹೆರುತ್ತಿದ್ದರು. ಅಂಥ ಸಂತಾನ ಎಂದು ಬಸವಣ್ಣನವರ ಬಗ್ಗೆ ಕಲ್ಪಿಸಿ, ಅಂಥ ವಾಮಾಚಾರಿ ಮಾದಿರಾಜನ ಮಗ ಎಂದು ಬಂಜಗೆರೆ ಊಹಿಸುತ್ತಾರೆ. ಅಂದು ಸಮಾಜದಲ್ಲಿ ವರ್ಣವ್ಯವಸ್ಥೆ, ಜಾತಿ ವ್ಯವಸ್ಥೆ ಅತ್ಯಂತ ಬಿಗಿಯಾಗಿದ್ದಿತು. ಅದರಲ್ಲಿಯೂ ಬ್ರಾಹ್ಮಣರು ಮಡಿವಂತಿಕೆಯಲ್ಲಿ ನಂಬಿಕೆ ಇಟ್ಟಿದ್ದವರು. ಅಧ್ಯಾತ್ಮಿಕ ಜಗತ್ತಿನ ಅಮೂಲ್ಯ ಪದಗಳಾದ ಕರ ಸಂಜಾತ, ಶಿಷ್ಯ(ಶಿಶು) ಮಗ, ಶಿವ ಸಂತಾನ ಮುಂತಾದವುಗಳಿಗೆ ಅಪಾರ್ಥ ಮಾಡಿ ಭಾರತೀಯ ದಾರ್ಶನಿಕ ಪರಂಪರೆಗೆ ಮಸಿ ಬಳಿಯಲಾಗಿದೆ. ಈ ದೇಶದಲಿಯಾರೇ ಪ್ರತಿಭಾವಂತರು, ವಿಶೇಷ ವ್ಯಕ್ತಿತ್ವ ಹೊಂದಿದವರು ಇದ್ದರೆ ಅವರು ಬ್ರಾಹ್ಮಣ

ಜನ್ಯರು ಎಂಬ ಭಾವ ಬಿತ್ತಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಡಾ|| ಅಂಬೇಡ್ಕರ್, ರಾಷ್ಟ್ರಕವಿ ಶ್ರೀ ಕುವೆಂಪುರವರು ಪ್ರತಿಭಾವಂತರಾಗಲು ಸಹ ಅಂಥ ಬ್ರಾಹ್ಮಣ ಅಂಶ ಕಾರಣ ಎಂದು ಯಾರೋ ಹೇಳಿದರು ಎಂದು ಬಂಜಗೆರೆ ಹೇಳುತ್ತಾರೆ. ಸಂಶೋಧಕ ಹಾದಿ ಬೀದಿಯಲ್ಲಿ ಹೋಗುವವರ ಮಾತನ್ನು ಉಲ್ಲೇಖಿಸುವುದಿಲ್ಲ; ಅಧಿಕೃತವಾಗಿ ಮಾತನಾಡುತ್ತಾನೆ. ಇಂಥ ಕೆಟ್ಟ ಊಹೆ ಡಾ|| ಅಂಬೇಡ್ಕರ್, ಕುವೆಂಪು ಅವರ ತಾಯಂದಿರ ಪಾವಿತ್ರ್ಯತೆಯನ್ನು ಸಂಶಯಿಸುತ್ತದೆ ಎಂಬ ಸಾಮಾನ್ಯ ಜ್ಞಾನವು ಈ ಲೇಖಕರಲ್ಲಿ ಇಲ್ಲ. ಹಾಗೆ ಹೇಳಿದ ಯಾರ ಹೆಸರನ್ನೂ ಬಂಜಗೆರೆ ಉಲ್ಲೇಖಿಸಿಲ್ಲವಾದ ಕಾರಣ ಇಂಥ ಕೆಟ್ಟ ಊಹೆಯ ಕರ್ತೃ ಬಂಜಗೆರೆಯವರೇ ಇರಬೇಕೆಂದು ನಾವೂ ಊಹಿಸಬೇಕಾಗುತ್ತದೆ. ಹೀಗೆ ಜಯಪ್ರಕಾಶರ ಪುಸ್ತಕ ಅನೇಕರ ಮೇಲೆ ಕೆಸರು ಚೆಲ್ಲುತ್ತದೆ. ಹೀಗಾಗಿ ಇದು ನಿಷೇಧಕ್ಕೆ ಎಲ್ಲ ರೀತಿಯಿಂದಲೂ ಅರ್ಹವಾಗಿರುವ ಪುಸ್ತಕ.

ಸಾಹಿತಿಗಳು, ಸಂಶೋಧಕರು ಎಂದು ಬೀಗುತ್ತಾ ಅಭಿವ್ಯಕ್ತಿ ಸ್ವಾತಂತ್ರ್ಯದ ಸೋಗಿನಲ್ಲಿ ಮಹಾತ್ಮರ ತೇಜೋವಧೆಯನ್ನು ಬಂಜಗೆರೆ ಜಯಪ್ರಕಾಶ್ ಮಾಡುವುದು, ಇದನ್ನು ಇನ್ನಿತರ ಕೆಲವು ಸಾಹಿತಿಗಳು ಸಮರ್ಥಿಸಿಕೊಳ್ಳುವುದು ಬೌದ್ಧಿಕ ಪ್ರಾಮಾಣಿಕತೆಯೆ? ಗುರು ಬಸವಣ್ಣನವರನ್ನು ಗಂಡು ಬಸವಿ, ಅವರ ಸೋದರಿ ಅಕ್ಕನಾಗಲಾಂಬಿಕೆಯನ್ನು ಹೆಣ್ಣು ಬಸವಿ ಅರ್ಥಾತ್ ದೇವದಾಸಿಯಾಗಿದ್ದರು ಎಂಬುದಕ್ಕಿಂತಲೂ ಹೀನವಾದ ನಿಂದೆ ಮತ್ತೊಂದು ಇದೆಯೆ?

ಇಂಥ ಕೆಟ್ಟ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳಬೇಕೆಂದು ಆಗ್ರಹಿಸಿ ರಾಷ್ಟ್ರೀಯ ಬಸವ ದಳ ಮತ್ತು ಇನ್ನೂ ಅನೇಕ ಬಸವಾಭಿಮಾನಿ ಸಂಘ- ಸಂಸ್ಥೆಗಳು ನಾಡಿನಾದ್ಯಂತ ಪ್ರತಿಭಟನೆ ಮಾಡುತ್ತಿರುವುದಲ್ಲದೆ ಅನೇಕ ಮಠಾಧೀಶರು ಅಕ್ಷರಶಃ ಬೀದಿಗೆ ಇಳಿದು ಚಳುವಳಿ ಮಾಡಿದರು. ದಿ.18-6-2007ರಂದು ರಾಷ್ಟ್ರೀಯ ಬಸವ ದಳವು ಸಾಂಕೇತಿಕವಾಗಿ ಒಂದು ದಿನದ ಮಟ್ಟಿಗೆ ಧರಣಿ ಸತ್ಯಾಗ್ರಹವನ್ನು ಬಸವೇಶ್ವರ ಸರ್ಕಲ್‌ದಲ್ಲಿರುವ ಬಸವ ಪುತ್ಥಳಿಯ ಮುಂಭಾಗದಲ್ಲಿ ಹಮ್ಮಿಕೊಂಡಿತ್ತು. ಆದರೆ ಸರ್ಕಾರವು ಈವರೆಗೂ ಯಾವುದೇ ರೀತಿ ಸ್ಪಂದಿಸದೆ ಇರುವುದು ವಿಷಾದನೀಯ. ಉಗ್ರವಾದಿಗಳು, ಹಿಂಸಾವಾದಿಗಳಿಗೆ ಸ್ಪಂದಿಸಿದಷ್ಟು ತೀವ್ರವಾಗಿ ಸಾತ್ವಿಕರಿಗೆ ಸರ್ಕಾರ ಪ್ರತಿಕ್ರಿಯೆ ತೋರದೆ ಇರುವುದು ನಿಜಕ್ಕೂ ದುರ್ದೈವದ ಸಂಗತಿ.

ಕರ್ನಾಟಕ ಸರ್ಕಾರದ ಈ ನಿರ್ಲಕ್ಷ್ಯವನ್ನು, ಉದಾಸೀನತೆಯನ್ನು ಖಂಡಿಸಿ ಇಂದು (5-7-2007) ಪ್ರತಿಭಟನಾ ಪ್ರದರ್ಶನ, ಮೆರವಣಿಗೆ ಮಾಡಿ ಈ ಆಗ್ರಹಪೂರ್ವಕ ಮನವಿಯನ್ನು ಸಲ್ಲಿಸಲಾಗುತ್ತಿದೆ.

ಸರ್ಕಾರದ ಕರ್ತವ್ಯವಲ್ಲವೆ ?

ವಿಶ್ವಗುರು ಬಸವಣ್ಣನವರ ಹೆಸರಿನಲ್ಲಿ ಯಾವ ಪ್ರಶಸ್ತಿ ಕೊಟ್ಟರೇನು? ಸರ್ಕಾರದ ವತಿಯಿಂದ ಬಸವ ಜಯಂತಿ ಮಾಡಿದರೇನು? ವಚನಗಳನ್ನು ಹಾಡಿಸಲು ಲಕ್ಷಾಂತರ ರೂಗಳನ್ನು ವ್ಯಯಿಸಿದರೇನು? ಬಂಜಗೆರೆ ಜಯಪ್ರಕಾಶ್ ಬರೆದಂಥ ಒಂದು ಪುಸ್ತಕ ಸಾಕು ಬಸವಣ್ಣನವರ ಚಾರಿತ್ರ್ಯಕ್ಕೆ ಮಸಿ ಬಳಿಯಲು! ಡಾ|| ಪಿ.ವಿ.ನಾರಾಯಣ ಬರೆದ "ಧರ್ಮಕಾರಣ" ಎಂಬ ಒಂದು ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು. ಇದನ್ನು ಪ್ರಶ್ನಿಸಿ ಸಾಹಿತಿಗಳು ಸರ್ವೋನ್ನತ ನ್ಯಾಯಾಲಯಕ್ಕೆ ಹೋದಾಗ ಅದು ಸರ್ಕಾರದ ನಿಲುವನ್ನು ಎತ್ತಿ ಹಿಡಿದು, ಯಾರದೇ ಧಾರ್ಮಿಕ ಭಾವನೆಗಳಿಗೆ ನೋವನ್ನು ಉಂಟು ಮಾಡುವ ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದ್ದು ಸರಿ ಎಂದು ಹೇಳಿದೆ. ಧರ್ಮಕಾರಣದಲ್ಲಿ ಎರಡು ಮೂರು

ಪ್ರಮಾದಕರ ಶರಣ ನಿಂದಕ ಪ್ರಸ್ತಾಪಗಳಿದ್ದರೆ ಬಂಜಗೆರೆ ಜಯಪ್ರಕಾಶರ ಪುಸ್ತಕ **"ಆನು ದೇವಾ ಹೊರಗಣವನು"** ಇದರಲ್ಲಿ ನೂರಾರು ಪ್ರಮಾದಗಳು, ದೂಷಣೆ, ಜಾತಿ ದ್ವೇಷ ತುಂಬಿ ತುಳುಕುತ್ತಿವೆ. ಈ ಕೃತಿ ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲ ಬಸವಾಭಿಮಾನಿಗಳನ್ನು ನೋಯಿಸಿದೆ. ಕೃತಿಯ ಪರವಾಗಿ ನಿಂತ ಸಾಹಿತಿಗಳು ಸಹ ಪುಸ್ತಕದೊಳಗಣ ಅಭಿಪ್ರಾಯಕ್ಕೆ ತಮ್ಮ ಸಹಮತವಿಲ್ಲ ಎಂದೇ ಹೇಳಿದ್ದಾರೆ. ವಿಶ್ವಗುರು ಬಸವಣ್ಣ ಮತ್ತು ಅವರ ಸಹೋದರಿ ಅಕ್ಕನಾಗಲಾಂಬಿಕೆಯ ಚರಿತ್ರೆ ಮತ್ತು ಚಾರಿತ್ರ್ಯ ಎರಡಕ್ಕೂ ಕಲಂಕ ಹಚ್ಚಿರುವ ಇಂಥ ಪುಸ್ತಕವನ್ನು ನಿಷೇಧಿಸಲು ಸರ್ಕಾರ ಆಸಕ್ತಿ ತೋರಿಸದೆ ಇರುವುದು ಏಕೆ? ಬಸವಣ್ಣನವರಂಥ ಒಂದು ನಾಡಿನ ಮಹಾನ್ ವ್ಯಕ್ತಿಯ ಗೌರವ ಕಾಪಾಡುವುದು ಸರ್ಕಾರದ ಕರ್ತವ್ಯವಲ್ಲವೆ? ಮುಖ್ಯ ಮಂತ್ರಿಗಳ ಧರ್ಮ- ಜಾತಿ ಏನೇ ಇರಲಿ ಅಧಿಕಾರಾರೂಢರು ಎಲ್ಲ ಧರ್ಮ, ಜಾತಿಗಳವರ ಭಾವನೆ -ನಂಬಿಕೆಗಳನ್ನು ಗೌರವಿಸಬೇಕಲ್ಲವೆ? ಮುಸ್ಲಿಂ ಬಂಧುಗಳು, ಸಿಖ್ ಧರ್ಮೀಯರು, ಕ್ರೈಸ್ತ ಬಂಧುಗಳು ತಮ್ಮ ಧರ್ಮಗುರುವಿನ, ಮಹಾತ್ಮರ ನಿಂದೆಯನ್ನು ಎಂದೂ ಸಹಿಸಿ ಕೊಳ್ಳುವುದಿಲ್ಲವಲ್ಲವೆ?

ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಯಾರು ಏನನ್ನು ಬೇಕಾದರೂ ಬರೆಯಬಹುದೆ? ಏನು ಬೇಕಾದರೂ ಮಾಡಬಹುದೆ? ಹಾಗಿದ್ದರೆ ಸಂವಿಧಾನದಲ್ಲಿ ಮಾನನಷ್ಟ ಮೊಕದ್ದಮೆ ಹೂಡಲು ಅವಕಾಶ ಏಕಿರುತ್ತಿತ್ತು? ಬದುಕಿರುವವರು ತಮಗೆ ಮಾನಹಾನಿಯಾದಾಗ ನ್ಯಾಯಾಲಯಕ್ಕೆ ಹೋಗುವರು. ಆಗಿ ಹೋಗಿರುವ ಮಹಾ ಪುರುಷರಿಗೆ ಮಾನಹಾನಿಯಾದಾಗ ಅವರ ಪರವಾಗಿ ಅವರ ಅನುಯಾಯಿಗಳು, ಅಭಿಮಾನಿಗಳು ಹೋರಾಡಬೇಕಲ್ಲವೆ?

ಸರ್ಕಾರದ ನಿರ್ಲಕ್ಷ್ಯ ಸಮರ್ಥನೀಯವೆ ?

ಹಿಂದೆ ಹಲವಾರು ಪುಸ್ತಕಗಳು ಇತಿಹಾಸವನ್ನು ತಿರುಚಿ ಅನೇಕ ಮಹಾತ್ಮರಿಗೆ ಅಪಚಾರವಾಗುವಂತೆ ಬರೆಯಲ್ಪಟ್ಟಾಗ ಜನರು ಅದನ್ನು ಪ್ರತಿಭಟಿಸಿದಾಗ ಸರ್ಕಾರಗಳು ತೀವ್ರವಾಗಿ ಸ್ಪಂದಿಸಿ ಪತ್ರಗಳನ್ನು ವಾಪಸು ಪಡೆದವು; ಪುಸ್ತಕಗಳನ್ನು ಮುಟ್ಟುಗೋಲು ಹಾಕಿದವು. ಈಗ ಸಾಹಿತಿಯೂ ಅಲ್ಲದ ಸಂಶೋಧಕರೂ ಅಲ್ಲದ ಒಬ್ಬ ಅನಾಮಿಕ ವ್ಯಕ್ತಿ ಜಯಪ್ರಕಾಶ್ ಬರೆದ ಒಂದು ಕ್ಷುಲ್ಲಕ ಪುಸ್ತಕವನ್ನು ನಿಷೇಧಿಸಲು ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರುವುದು ಏಕೆ? ರಾಜ್ಯ ಸರ್ಕಾರದ ಒಂದು ಜವಾಬ್ದಾರಿ ಸ್ಥಾನದಲ್ಲಿರುವ ಗೃಹಮಂತ್ರಿ ಶ್ರೀ ಎಂ.ಪಿ.ಪ್ರಕಾಶ್ ಬಂಜಗೆರೆಯ ಹೀನ ಪುಸ್ತಕವನ್ನು ಪ್ರೋತ್ಸಾಹಿಸಿರುವುದಕ್ಕಾಗಿ ಕರ್ನಾಟಕ ಸರ್ಕಾರ ಜನಾಭಿಪ್ರಾಯ ಕುರಿತು ಈ ನಿರ್ಲಕ್ಷ್ಯ ತೋರುತ್ತಿದೆಯೋ? ಜನರ ಭಾವನೆಗಳಿಗೆ ಸ್ಪಂದಿಸಬೇಕಾದ ಸರ್ಕಾರಕ್ಕೆ ಎಂ.ಪಿ.ಪ್ರಕಾಶರ ಹಿತವನ್ನು ಕಾಯ್ದುಕೊಳ್ಳುವುದು ಮುಖ್ಯವೊ? ಅಥವಾ ಜನರ ನೋವಿಗೆ ಸ್ಪಂದಿಸುವುದು ಮುಖ್ಯವೋ? ಜವಾಬ್ದಾರಿ ಸ್ಥಾನದಲ್ಲಿರುವ ತಾವೇ ಆಲೋಚಿಸಿರಿ. ಅಥವಾ ತಮಗೂ ವೈಯಕ್ತಿಕವಾಗಿ ವಿಶ್ವಗುರು ಬಸವಣ್ಣನವರ ತೇಜೋವಧೆಯಾಗುವುದು ಸಂತೋಷ ತರುವ ಸಂಗತಿಯೋ?

ಕನ್ನಡ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಹೊಣೆಗಾರಿಕೆ ಹೊಂದಿರುವ ಸಚಿವ ಹೆಚ್.ಎಸ್.ಮಹದೇವ ಪ್ರಸಾದರು, ರೋಮ್ ರಾಜಧಾನಿ ಹೊತ್ತಿ ಉರಿಯುವಾಗ ನೀರೋ ಪಿಟೀಲು ಬಾರಿಸುತ್ತ ಆನಂದಿಸುತ್ತಿದ್ದಂತೆ, ಯಾವುದೇ ಕಳಕಳಿ ಇಲ್ಲದೆ ಸಾಹಿತಿಗಳ ಸಮಿತಿಯನ್ನು ರಚಿಸಿ ಅಭಿಪ್ರಾಯ ಪಡೆಯುವ ಹೇಳಿಕೆಯನ್ನು ನಿನ್ನೆ ತಾನೇ ನೀಡಿದ್ದಾರೆ. ಅಂಗೈ ಹುಣ್ಣು ನೋಡಲು ಕನ್ನಡಿ ಬೇರೆ ಬೇಕೆ? ಬಂಜಗೆರೆಯ ಪುಸ್ತಕ ಅಸಭ್ಯ ಮತ್ತು ಅಶ್ಲೀಲವಾಗಿದೆ ಎಂಬುದನ್ನು ಸಾಮಾನ್ಯರೂ ಗುರುತಿಸಿರುವಾಗ ಈ ಬಗ್ಗೆ ತೋರುತ್ತಿರುವ ಜಾಣ ಕಿವುಡು, ಜಾಣ ಕುರುಡು

ಸರ್ಕಾರಕ್ಕೆ ಉಚಿತವೆ?

ಕನ್ನಡ ಸಾಹಿತ್ಯಕ್ಕೆ ಕಪ್ಪು ಚುಕ್ಕೆಯಾಗಿರುವ ಬಂಜಗೆರೆ ಜಯಪ್ರಕಾಶರ ಪುಸ್ತಕ **"ಆನು ದೇವಾ ಹೊರಗಣವನು"** ನಿಷೇಧವಾಗುವವರೆಗೂ ನಮ್ಮ ಹೋರಾಟ ನಿಲ್ಲದೆ ಮುಂದುವರಿಯುವುದು ಎಂಬುವುದನ್ನು ಸ್ಪಷ್ಟವಾಗಿ ನಿಮ್ಮ ಗಮನಕ್ಕೆ ತರುತ್ತಿದ್ದೇವೆ. ಚಳುವಳಿ, ಸತ್ಯಾಗ್ರಹಗಳಿಂದ ಜನರ ಸಮಯ, ಶಕ್ತಿ, ಹಣ ಎಲ್ಲವೂ ಅಪವ್ಯಯವಾಗುತ್ತವೆ ಎಂಬುದನ್ನು ತಾವು ಮನಗಂಡು ಈ ತಕ್ಷಣವೇ ಬಂಜಗೆರೆ ಜಯಪ್ರಕಾಶರ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆಗ್ರಹಿಸುತ್ತಿದ್ದೇವೆ.

ಸಂಘ ಸಂಸ್ಥೆಗಳ ಒಕ್ಕೂಟ

ಪೂಜ್ಯ ಶ್ರೀ ದಯನಂದ ಸ್ವಾಮೀಜಿ
ವಿಶ್ವ ಬಸವ ಧರ್ಮ ಮಹಾಸಭಾ

ಶರಣೆ. ಶ್ರೀಮತಿ. ಎಸ್.ಜಿ. ಸುಶೀಲಮ್ಮ
ಸುಮಂಗಲಿ ಸೇವಾಶ್ರಮ

ಶರಣ.ಡಾ|| ಹೆಚ್.ಚಂದ್ರಶೇಖರ್

ಶರಣ. ಆರ್.ಹೆಚ್. ಚಂದನಗೌಡರ

ಶರಣೆ.ವಿನೋದಾ ಕೃಷ್ಣಮೂರ್ತಿ
ಬಸವಾತ್ಮಜೆ ಸ್ತ್ರೀ ಶಕ್ತಿ ಸಂಘ

ಕಾವೇರಿ ಮಹಿಳಾ ಮಂಡಳಿ ಒಕ್ಕೂಟ,
ಬೆಂಗಳೂರು ಉತ್ತರ ತಾಲ್ಲೋಕು

ಸಾಧನಾ ಸಂಸ್ಥೆ, ಬೆಂಗಳೂರು,
ದಕ್ಷಿಣ ತಾಲೋಕು

ಬಸವಾನಂದ ನರ್ಸರಿ,
ಪ್ರೈಮರಿ, ಹೈಸ್ಕೂಲ್, ಬೆಂಗಳೂರು,

ಬಸವ ಗಂಗೋತ್ರಿ ಅನಾಥಾಲಯ
ಕುಂಬಳಗೋಡು, ಬೆಂಗಳೂರು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ

ಪೂಜ್ಯಶ್ರೀ ಮಾತೆ ಜ್ಞಾನೇಶ್ವರಿ

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ

ಪೂಜ್ಯ ಶ್ರೀ ಮಾತೆ ಸತ್ಯಾದೇವಿ

ಶರಣ. ಎನ್.ಪುಟ್ಟರುದ್ರ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಶರಣ.ವೀರಣ್ಣ,ಲಿಂಗಾಯತ್
ಅಧ್ಯಕ್ಷರು,ಕರ್ನಾಟಕ ರಾಜ್ಯ
ರಾಷ್ಟ್ರೀಯ ಬಸವ ದಳ

ಶರಣೆ.ದೇವಿಕಾ ಶರಣಪ್ಪ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ

ಶರಣೆ. ಲೀಲಾವತಿ ನಾಡಗೌಡ
ಅಧ್ಯಕ್ಷರು, ಅಕ್ಕನಾಗಲಾಂಬಿಕಾ ಮಹಿಳಾ ಗಣ

ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದರಿ ಬಸವಣ್ಣಾ;
ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ ಬಸವಣ್ಣಾ;
ಜಂಗಮವಾಗಿ ಬಂದೆನ್ನ ಪ್ರಪಂಚುಕತನವ ಕಳೆದು,
ಪರಮಸೀಮೆಯ ತೋರಿದರಿ ಬಸವಣ್ಣಾ ;
ಇಂತಿವೆಲ್ಲವೂ ಬಸವಣ್ಣನಾಗಿ ಎನಗೆ ಪ್ರಸಾದವ ನೀಡಿ ಸಲುಹಿದ
ಕಪಿಲಸಿದ್ಧ ಮಲ್ಲಿಕಾರ್ಜುನಾ, ಇನ್ನೆನಗತಿಶಯವೇನೂ ಇಲ್ಲ
- ಬಸವ ಯೋಗಿಸಿದ್ದರಾಮೇಶ್ವರರು

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ

812ನೆಯ ಲಿಂಗೈಕ್ಯ ದಿನಾಚರಣೆ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠ, ಕೂಡಲ ಸಂಗಮ



ಶರಣ (ಶನಿ)ವಾರ ದಿ. 18-8-2007 ರಂದು ಬೆಳಿಗ್ಗೆ 10-30

ದೇವ (ಭಾನು)ವಾರ ದಿ.19-8-2007ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣ ಜೀವಾಳ

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಅಶುಭವಲ್ಲ ಶುಭವೂ ಅಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಆಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು, ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಸಭಾಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಅವಧಿಯಲ್ಲಿ ಧರ್ಮಗುರು ಬಸವಣ್ಣನವರ ಸಮಗ್ರ ವಚನಗಳನ್ನು ನಿಷ್ಠೆಯಿಂದ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯರಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

★ ಸರ್ವರಿಗೂ ಆದರದ ಸುಸ್ವಾಗತ ★

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 812ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ : ಸರ್.ಕೆ.ಪಿ. ಪುಟ್ಟಣ್ಣಶೆಟ್ಟಿ ಪುರಭವನ, ಬೆಂಗಳೂರು, ಬೆಳಿಗ್ಗೆ. 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 812ನೆಯ ಲಿಂಗೈಕ್ಯ ದಿನವು ಶನಿ (ಶರಣ)ವಾರ ದಿ. 18-8-2007ರಂದು ಒದಗಿ ಬಂದಿದೆ.

ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 812ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ಎಲ್ಲರ ಕರ್ತವ್ಯವಾಗಿರುವುದರಿಂದ ರಾಜಾಜಿ ನಗರದ ಬಸವ ಮಂಟಪದಲ್ಲಿ ಶ್ರಾವಣ ಅಮವಾಸ್ಯೆಯ ಮರು ದಿವಸದಿಂದ ಪತ್ರಿನಿತ್ಯ ಬೆಳಿಗ್ಗೆ 7-30ರಿಂದ ವಿಶೇಷವಾಗಿ ಬಸವೇಶ್ವರ ಪೂಜಾವ್ರತವನ್ನು ಏರ್ಪಡಿಸಲಾಗುವುದು. ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಸಂಕಲ್ಪ ಮಾಡಿಕೊಂಡು ಪೂಜಿಸುವ ಶರಣ ಬಂಧುಗಳಿಗೆ ಪೂಜಾ ಸಾಮಗ್ರಿಗಳೊಡನೆ ಬಂದು ಪುಷ್ಪಾರ್ಚನೆ ಮಾಡಲು ಅವಕಾಶ ಉಂಟು.

ದಿ. 18-8-07 ಮತ್ತು 19-8-07ರಂದು ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪವಿರುವ ಸರ್.ಕೆ.ಪಿ. ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ಬೆಳಿಗ್ಗೆ 10-30ರಿಂದ ವಿಶೇಷ ಕಾರ್ಯಕ್ರಮ ಏರ್ಪಾಡಾಗಿರುತ್ತದೆ. ದಿ.18ರಂದು ಇಷ್ಟಲಿಂಗ ಯೋಗ ವಿಜ್ಞಾನ, ಅದರೊಳಗಣ ವಿಶೇಷತೆ ಕುರಿತು ಈ ಬಗ್ಗೆ ವಿಶೇಷ ಅಧ್ಯಯನ, ಸಂಶೋಧನೆ ಮಾಡಿ ಗ್ರಂಥವನ್ನು ರಚಿಸಿರುವ ಶರಣ. ಬಸವರಾಜಪ್ಪ ಮೆಣಸಿನಕಾಯಿ, ಶಿರಗುಪ್ಪಿ ಇವರೊಡನೆ ಸಂವಾದ ಮತ್ತು ಕಲ್ಯಾಣ ಕ್ರಾಂತಿಯ ವಿಶೇಷ ನೃತ್ಯ ರೂಪಕ ಎಲ್ಲರಿಗೆ ಚೆಲ್ಲಾದ ಕಲ್ಯಾಣ ಬಸವಯ್ಯ ಏರ್ಪಡಿಸಲಾಗಿದೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಬಸವ ಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ.19-8-2007ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 812 ನೆಯ ಬಸವ ಪಂಚಮಿಯ ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್ ದಿಂದ ಹೊರಟು ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು, ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನ ಮೇಲೆ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದರಿಂದ ಇದನ್ನೇ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ. ಸರ್ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್ ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲಿದೆ.

ವಿಶೇಷ ಸೂಚನೆ: ಕಾರ್ಯಕ್ರಮದ ವಿಶೇಷ ಆಹ್ವಾನ ಪತ್ರವನ್ನು ಅತಿಥಿಗಳ ಹೆಸರಿನೊಡನೆ ಮುದ್ರಿಸಲಾಗುವುದು. ಈ ಕರಪತ್ರವನ್ನು ಬಹಳ ಮೊದಲೇ ಮುದ್ರಿಸಲಾಗಿದೆ. ವಿಶೇಷ ಆಹ್ವಾನ ಪತ್ರವನ್ನು ಎಲ್ಲರಿಗೂ ತಲಿಸಲು ಸಾಧ್ಯವಾಗದು. ಇದನ್ನೇ ಆಹ್ವಾನವೆಂದು ಸ್ವೀಕರಿಸಲು ಕೋರಿಕೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಕಾರ್ಯಕ್ರಮ ವ್ಯವಸ್ಥಾಪಕರು :

ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-23325335 / 23131476

ಬಸ್ ಮಾರ್ಗ
ಮೆಜೆಸ್ಟಿಕ್ ನಿಂದ
251, 80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು.
-ಚನ್ನಬಸವಣ್ಣನವರು

ಇಷ್ಟಲಿಂಗ ಯೋಗ

-ಶರಣ ಸಚ್ಚಿದಾನಂದ

ಪರುಷ ಸೋಂಕಿದ ಬಳಿಕ ಕಾರ್ಬೊನ್ನದ ಕೇಡು ನೋಡಿರಯ್ಯಾ
ಜ್ಯೋತಿ ಸೋಂಕಿದ ಬಳಿಕ ತಮಂಧದ ಕೇಡು ನೋಡಿರಯ್ಯಾ
ಅಮೃತ ಸೋಂಕಿದ ಬಳಿಕ ರೋಗದ ಕೇಡು ನೋಡಿರಯ್ಯಾ
ನಮ್ಮ ಯೋಗಿನಾಥನ ಸೋಂಕಿದ ಬಳಿಕ ಭವದ ಕೇಡು ನೋಡಿರಯ್ಯಾ.

ಗುರು ಸಿದ್ಧರಾಮೇಶ್ವರರು ಈ ವಚನದಲ್ಲಿ ನಾವು ಪೂಜಿಸುವ ಇಷ್ಟಲಿಂಗದ ಮಹತ್ವವನ್ನು ಹೇಳುತ್ತಿದ್ದಾರೆ. ಪರುಷ ಸೋಂಕಿಸಿಕೊಂಡ ಕಬ್ಬಿಣ ಹೊನ್ನಾಗುತ್ತದೆ. ಜ್ಯೋತಿ ಹಚ್ಚಿದಾಗ ಕತ್ತಲೆ ಕೆಟ್ಟು ಹೋಗುತ್ತದೆ. ಅಮೃತ ಸೇವಿಸಿದವರಿಗೆ ರೋಗ ಬರುವುದೇ ಇಲ್ಲ. ಅದೇ ರೀತಿ ಲಿಂಗದೇವ(ಯೋಗಿನಾಥ)ನ ಸೋಂಕಿನಿಂದ ವಂಶ ವಂಶ ತಪ್ಪದೆ ಅರಸಿಕೊಂಡು ಬಂದು ನಮ್ಮನ್ನು ಹಿಡಿದು ಹಿಡಿದು ಕೊಲ್ಲುತ್ತಿರುವ ಭವ ನಾಶವಾಗುತ್ತದೆ ಎಂದು ಹೇಳುತ್ತಿದ್ದಾರೆ.

ಪರುಷ ಸ್ಪರ್ಶನದ ನಂತರವೂ ಕಬ್ಬಿಣ ಹೊನ್ನಾಗದೇ ಹೋದರೆ...? ಜ್ಯೋತಿ(ದೀಪ) ಹಚ್ಚಿದ ಬಳಿಕವೂ ಕತ್ತಲೇ ಹೋಗದೆ ಇದ್ದರೆ..? ಇಷ್ಟಲಿಂಗ ಧರಿಸಿದ ನಂತರವೂ ನಮ್ಮ ನೋವು, ಯಾತನೆ, ಬಳಲಿಕೆ, ಭ್ರಮೆ ಎನ್ನುವಂತಹ ಭವದ ಕೇಡಾಗದಿದ್ದರೆ...? ದಿನ ನಿತ್ಯವೂ ಇಷ್ಟಲಿಂಗ ಪೂಜೆ ಮಾಡುವ ನಮ್ಮಲ್ಲಿ ಶಾಂತಿ ಸಮಾಧಾನಗಳು ನೆಲೆಗೊಳ್ಳುತ್ತಿಲ್ಲವಲ್ಲ..?12ನೇ ಶತಮಾನದ ಶರಣರಷ್ಟು ಸುಯಿಧಾನ ನಮ್ಮಲ್ಲಿ ಅಳವಡುತ್ತಿಲ್ಲವಲ್ಲ...! ಇದಕ್ಕೆ ಕಾರಣವೇನು ಎಂದು ಯೋಚಿಸುತ್ತಿರುವಾಗಲೇ ಗುರು ಬಸವಣ್ಣನವರ ವಚನವೊಂದು ನನ್ನ ಮನಸ್ಸಿನಲ್ಲಿ ಉದ್ಭವಿಸಿದ ಪ್ರಶ್ನೆಗಳಿಗೆ ಪರಿಹಾರ ನೀಡುತ್ತಿದೆ.

ಕಬ್ಬುನ ಪರುಷವೇದಿಯಾದಡೇನು
ಕಬ್ಬುನ ಹೊನ್ನಾಗದಡಾ ಪರುಷವದೇಕೋ?
ಮನೆಯೊಳಗಣ ಕತ್ತಲೆ ಹರಿಯದಡಾ ಜ್ಯೋತಿಯದೇಕೋ?
ಲಿಂಗದೇವನ ಮನಮುಟ್ಟಿ ಪೂಜಿಸಿ ಕರ್ಮ ಹರಿಯದಡಾ ಪೂಜೆಯದೇಕೋ?

ಕಬ್ಬಿಣವನ್ನು ಸ್ಪರ್ಶಿಸಿ ಅದನ್ನು ಬಂಗಾರವನ್ನಾಗಿ ಮಾಡುವುದು ಪರುಷದ ಮೂಲಭೂತವಾದ ಗುಣ. ಒಂದು ವೇಳೆ ಪರುಷ ಸ್ಪರ್ಶವಾದ ನಂತರವೂ ಕಬ್ಬಿಣ ಹೊನ್ನಾಗುತ್ತಿಲ್ಲ ಎಂದರೆ, ಇಲ್ಲಿ ಪರುಷದ ಮೂಲ ಗುಣದಲ್ಲಿ ವ್ಯತ್ಯಾಸವಿದೆ, ಅಂಥ ಪರುಷವದೇಕೋ? ಎಂದು ಕೇಳಿ ಅಂಥ ಪರುಷ ನಿಷ್ಪ್ರಯೋಜಕವಾದುದು ಎನ್ನುವ ನಿರ್ಣಯವನ್ನು ಧರ್ಮಪಿತರು ಈ ವಚನದಲ್ಲಿ ಕೊಡುತ್ತಿದ್ದಾರೆ. ಜ್ಯೋತಿ ಹಚ್ಚುವ ಮೂಲ ಉದ್ದೇಶ ಮನೆಯೊಳಗಣ ಕತ್ತಲೆ ಕಳೆಯುವುದು. ಒಂದು ವೇಳೆ ನಾವು ಹಚ್ಚಿದ ಜ್ಯೋತಿಯಿಂದ ಕತ್ತಲೆ ಓಡಿಹೋಗಿ ಬೆಳಕು ಬರುತ್ತಿಲ್ಲ ಎಂದರೆ ಕತ್ತಲೆ ತುಂಬಾ ಬಲಿಷ್ಠವಾಗಿದೆ ಎಂದು ಅರ್ಥವಲ್ಲ. ನಾವು ಹಚ್ಚಿರುವ ಜ್ಯೋತಿ ಸರಿಯಿಲ್ಲ, ಅದಕ್ಕೆ ಕುಡಿ ಬಂದಿದೆ ಅಥವಾ ದೀಪಕ್ಕೆ ಎಣ್ಣೆ ಪೂರೈಕೆಯಾಗುತ್ತಿಲ್ಲ ಎಂದು ಅರ್ಥ. ಇಂದಿನ ಕಾಲದಲ್ಲಿ ನಾವು ವಿದ್ಯುತ್ ಬಲ್ಬುಗಳನ್ನು ಬಳಸುತ್ತೇವೆ. ನಾವು ಹಚ್ಚಿರುವ ಬಲ್ಬಿನಿಂದ ಕತ್ತಲೆ ಕಳೆಯುತ್ತಿಲ್ಲ ಎಂದರೆ, ಬಲ್ಬಿನಲ್ಲಿ ಏನೋ ತೊಂದರೆ ಇದೆ ಎಂದು ಅರ್ಥವೇ ಹೊರತು ಕತ್ತಲೆ ಘನವಾಗಿದೆ ಎಂದಲ್ಲ. ಬಲ್ಬು ಶಾರ್ಟ ಸರ್ಕಿಟ್(Short Circuit) ಆಗಿರಬಹುದು ಅಥವಾ ಬಲ್ಬಿನಲ್ಲಿ ವಿದ್ಯುತ್ ಹರಿಯುತ್ತಿರಲಿಕ್ಕಿಲ್ಲ. ಇಂಥ ಜ್ಯೋತಿಯದೇಕೋ? ಎಂದು ಗುರು ಬಸವಣ್ಣನವರು ಮೇಲಿನ ವಚನದಲ್ಲಿ ಕೇಳುತ್ತಿದ್ದಾರೆ.

ಅದೇ ರೀತಿ ನಾವು ಲಿಂಗದೇವರನ್ನು ಮನಮುಟ್ಟಿ, ಭಕ್ತಿಯಿಂದ ಪೂಜಿಸಿದಾಗ ನಮ್ಮ ಮನಸ್ಸು ಶಾಂತಗೊಳ್ಳಬೇಕು. ನಮ್ಮ ಮಾನಸಿಕ ತೊಳಲಾಟ ತೊಲಗಿ ಜೀವನದಲ್ಲಿ ಸುಖ ಶಾಂತಿ ನೆಮ್ಮದಿಗಳು ನೆಲೆಗೊಳ್ಳಬೇಕು. ಇವೆಲ್ಲಕ್ಕೂ ಮಿಗಿಲಾಗಿ ನಮ್ಮ ಕರ್ಮ ಹರಿಯಬೇಕು. ಇದೆಲ್ಲ ಆಗುತ್ತಿಲ್ಲ ಎಂದರೆ ಕರ್ಮಗಳು ಬೆಟ್ಟದಷ್ಟಿವೆ, ಮರಹು ಘನವಾಗಿದೆ ಎಂದು ಅರ್ಥವಲ್ಲ. ನಾವು ಪೂಜೆ ಮಾಡುವ ರೀತಿ, ನಮ್ಮ ಸಾಧನೆಯ

ಹಾದಿ ಸರಿಯಿಲ್ಲ ಎಂದೇ ಅರ್ಥ. ಅಂಥ ಪೂಜೆಯದೇಕೋ? ಎನ್ನುತ್ತಾರೆ ಧರ್ಮಪಿತರು.

ಕರಿಘನ ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ
ಗಿರಿ ಘನ ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ
ತಮಂಧ ಘನ ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ
ಮರಹು ಘನ ನಿಮ್ಮ ನೆನೆವ ಮನ ಕಿರಿದೆನ್ನಬಹುದೇ?
ಬಾರದಯ್ಯಾ ಲಿಂಗದೇವಾ.

ನಮ್ಮ ಕರ್ಮಗಳು ಬೆಟ್ಟದಷ್ಟಿರಬಹುದು, ಆದರೆ ಅವುಗಳನ್ನು ಅಳಿಸಲಿಕ್ಕೆ ಲಿಂಗದೇವನ್ನು ನೆನೆಯುವ ಮನವೇ ಸಾಕು. ಒಂದು ವೇಳೆ ಸರಿಯಾದ ರೀತಿಯಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆಯಿಂದ ಇಷ್ಟಲಿಂಗಾರ್ಚನೆ ಮಾಡಿದ್ದೇ ಆದರೆ ಖಂಡಿತವಾಗಿಯೂ ಕರ್ಮ ಹರಿಯುತ್ತದೆ.

12ನೇ ಶತಮಾನದಲ್ಲಿ ಇಷ್ಟಲಿಂಗ ದೀಕ್ಷೆ ಹೊಂದಿದ ಅನೇಕರು ದನ ಕಾಯುವ ಕಾಯಕದವರು, ಕಸ ಗೂಡಿಸುವವರು, ಕುಟ್ಟುವವರು, ಬೀಸುವವರು, ಒಕ್ಕಲಿಗರು ಇಂಥ ಬಗೆಬಗೆಯ ಕಾಯಕ ಮಾಡುವವರೆಲ್ಲಾ ಮೊದಲು ಓದು ಬರಹ ಬಾರದೇ ಇದ್ದವರು. ಆದರೆ ಇಷ್ಟಲಿಂಗ ದೀಕ್ಷೆಯ ನಂತರ ಅವರಲ್ಲಿ ಅದ್ಭುತ ಪರಿವರ್ತನೆಯಾಗಿ ಸುಲಭವಾಗಿ ಓದು ಬರಹ ಕಲಿತು, ಜ್ಞಾನಿಗಳಾದರು, ಅನುಭಾವಿಗಳಾದರು ಮಾತ್ರವಲ್ಲ, ಕನ್ನಡ ತಾಯಿಯ ಸಿರಿಮುಡಿಗೆ ವಚನ ಪುಷ್ಪಗಳನ್ನೇರಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಇಷ್ಟಲಿಂಗ ಯೋಗ ಮಾಡಿ ವಿಶೇಷವಾದ ಅನುಭಾವವನ್ನು ಪಡೆದು ಮುಕ್ತಾತ್ಮರಾದರು.

ಇಷ್ಟಲಿಂಗ ದೀಕ್ಷೆ ಹೊಂದಿದ ನಾವು ದಿನನಿತ್ಯ ಪೂಜಿಸುತ್ತ ಇಷ್ಟಲಿಂಗ ಯೋಗ ಮಾಡುವ ನಾವು 12ನೇ ಶತಮಾನದ ಶರಣರಂತೆ ಆಗುತ್ತಿಲ್ಲ; ಅವರಂತೆ ನಮ್ಮಲ್ಲಿ ಜ್ಞಾನ ಅಂಕುರಿಸುತ್ತಿಲ್ಲ, ಅವರಂಥ ನಿರ್ಲಿಪ್ತತೆ, ಲಿಂಗದೇವನಲ್ಲಿ ಶರಣಾಗತಿ, ನಂಬಿಕೆಗಳು ನಮ್ಮಲ್ಲಿ ಅಳವಡುತ್ತಿಲ್ಲ ಎಂದರೆ, ನಾವು ಮಾಡುವ ಪೂಜೆ ಸರಿಯಿಲ್ಲ. ಸರಿಯಾದ ಮನಸ್ಸಿನಿಂದ ನಾವು ನೆನೆಯುತ್ತಿಲ್ಲ, ಅದಕ್ಕಾಗಿ ಇಂಥ ಪೂಜೆಯದೇಕೋ? ಎಂದು ಗುರು ಬಸವಣ್ಣನವರು ಕೇಳುತ್ತಿದ್ದಾರೆ. ಇಲ್ಲಿ ನಾವು ಇಟ್ಟಿರುವ ಸದಾಚಾರದ ಬತ್ತಿ ಸರಿಯಿಲ್ಲ ಅಥವಾ ಭಕ್ತಿ ರಸದ ಎಣ್ಣೆ ಇದರಲ್ಲಿ ಹರಿಯುತ್ತಿಲ್ಲ ಅಥವಾ ಅಹಂಕಾರವೆಂಬ ಕುಡಿಬಂದಿದೆ ಎಂದೇ ಅರ್ಥ. ಅದಕ್ಕಾಗಿಯೇ ಇಷ್ಟಲಿಂಗಯೋಗ ಎನ್ನುವ ಜ್ಯೋತಿಯಿಂದ ನಮ್ಮ ಕರ್ಮದ ಕತ್ತಲೆ ಹರಿಯುತ್ತಿಲ್ಲ.

ಸತ್ಯವಿಲ್ಲದ ಭಕ್ತಿ ಸಾವಿರ ವರ್ಷ ಮಾಡಿದರೇನು?
ನಿಷ್ಠೆಯಿಲ್ಲದ ಪೂಜೆಯನೇಸುಕಾಲ ಮಾಡಿದರೇನು?
ಭಾವ ನೆಲೆಗೊಳ್ಳದ ಪ್ರಸಾದವನೇಸು ಕಾಲ ಕೊಂಡಲ್ಲಿ ಫಲವೇನು?
ಅಭ್ಯಾಸವಾಯಿತ್ತಲ್ಲದೆ, ಒಬ್ಬರ ಕಂಡು ಮಾಡುವರಲ್ಲದೆ
ಸಹಜವಿಲ್ಲ, ಸಮ್ಯಕ್ ಇಲ್ಲ, ಇದು ಕಾರಣ ಇಂತಪ್ಪವರ ಭಕ್ತರೆನಲಾಗದು
ಕೂಡಲ ಚೆನ್ನ ಸಂಗಮದೇವಾ ನೀ ಸಾಕ್ಷಿಯಾಗಿ ಛೀ ಎಂಬೆನು

ಸತ್ಯ ನಿಷ್ಠೆ ಸದ್ಭಾವಗಳಿಂದ ಪೂಜಿಸಬೇಕು ಎಂದು ಗುರು ಚೆನ್ನ ಬಸವಣ್ಣನವರು ಹೇಳಿದ್ದಾರೆ. ಹಾಗಾದರೆ ಇಷ್ಟಲಿಂಗ ಯೋಗ ಮಾಡುವುದರಿಂದ ಕರ್ಮ ಹೇಗೆ ಹರಿಯುತ್ತದೆ? ಇದಕ್ಕೂ ಕರ್ಮಕ್ಕೂ ಏನು ಸಂಬಂಧ? ಈ ಯೋಗದ ಮಹತ್ವವೇನು? ಅದನ್ನು ಹೇಗೆ ಮಾಡಬೇಕು ಎಂಬುದನ್ನು ತಿಳಿದುಕೊಳ್ಳೋಣ.

ಸಕಲೇಂದ್ರಿಯಗಳಲ್ಲಿ ವಿಕಾರಿಸಿ ಹರಿವ ಮನವ ಸೆಳೆದು ನಿಂದಾತನೇ ಸುಖಿ
ಪಂಚೇಂದ್ರಿಯಂಗಳಿಚ್ಛೆಯಲ್ಲಿ ಕೀಳು ಮನಗೊಂಡು ಸುಳಿವಾತನೇ ದುಃಖಿ
ಮನವು ಬಹಿರ್ಮುಖವಾಗಲು ಮಾಯಾ ಪ್ರಪಂಚಿ
ಮನವು ಅಂತರ್ಮುಖವಾದೊಡೆ ಅವಿರಳ ಜ್ಞಾನಿ

ಮನವು ಮಹದಲ್ಲಿ ನಿಂದಿರಲಾತ ಮುಕ್ತನು.
ಮನೋರ್ಲಯವಾದೊಡೆ ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಅಭೇದ್ಯನು.

ನಮ್ಮ ಎಲ್ಲಾ ಸುಖ ದುಃಖಗಳಿಗೂ ಮನಸ್ಸೇ ಕಾರಣ. ಬಂಧನಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣ. ಮನಸ್ಸಿಗೆ ಅದ್ಭುತವಾದ ಶಕ್ತಿ ಇದೆ. ಯಾವುದೇ ಯಂತ್ರ ತಂತ್ರದಿಂದ ಮಾಡಲಾಗದ ಕಾರ್ಯವನ್ನು ಮನಸ್ಸು ಮಾಡುತ್ತದೆ, ಆದರೆ ಇದರ ಸ್ವಭಾವ ಚಂಚಲ. ಕಷ್ಟಗಳನ್ನು ತಂದೊಡ್ಡುವುದು, ಇಲ್ಲದುದನ್ನು ಕಲ್ಪಿಸಿ ಚಿಂತಿಸುವುದು, ಇದ್ದುದನ್ನು ಅಲ್ಲಗಳೆಯುವುದು ಇದರ ಗುಣ. ಮನ ಬಂದುದನ್ನು ಬಯಸಿ ಬಯಸಿ ಬೇಯುತ್ತಿದ್ದೇನೆ ಎನ್ನುವ ಹಾಗೆ, ಯಾರು ಪಂಚೇಂದ್ರಿಯಗಳಲ್ಲಿ ಹರಿಯುವ ಮನಸ್ಸಿನ ದಾಸರಾಗುತ್ತಾರೋ ಅವರೇ ದುಃಖಿಗಳು; ಯಾರು ಸಕಲೇಂದ್ರಿಯಗಳಲ್ಲಿ ವಿಕಾರಿಸಿ ಹರಿವ ಮನಸ್ಸಿನ ಅರಸರಾಗುತ್ತಾರೋ ಅವರೇ ಸುಖಿಗಳು. ಯಾರ ಮನಸ್ಸು ಸುಖವನ್ನು ಹೊರಗಿನ ವಸ್ತುಗಳಲ್ಲಿ ಅರಸುತ್ತದೆಯೋ ಅವರೇ ಮಾಯಾಪ್ರಪಂಚಿ. ಯಾರ ಮನಸ್ಸು ಅಂತರಂಗದಲ್ಲಿ, ಗುರು ಬಸವಣ್ಣನವರ ತೇಜದಲ್ಲಿ ಸುಖವನ್ನು ಅರಸುತ್ತದೆಯೋ ಅವರೇ ಅವಿರಳ ಜ್ಞಾನಿ. ಯಾರ ಮನಸ್ಸು ಮಹತ್ತಿಂಗೆ ಮಹತ್ತೆನಿಸುವ ಲಿಂಗದೇವನನ್ನು ಅರಿದು, ತನ್ನಲ್ಲಿ ಲಿಂಗದೇವನನ್ನು ಲಿಂಗದೇವನಲ್ಲಿ ತನ್ನನ್ನು ಕಂಡುಕೊಳ್ಳುತ್ತಾರೋ ಅವರೇ ಮುಕ್ತರು. ಅವರೇ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಅಭೇದ್ಯರು ಎಂದು ನಿಜದ ಅನುಭಾವಿ ಶರಣ ಆದಯ್ಯನವರು ತಮ್ಮ ವಚನದಲ್ಲಿ ಹೇಳಿದ್ದಾರೆ.

ಸುತ್ತಿ ಸುತ್ತಿ ಬಂದಡಿಲ್ಲ ಲಕ್ಷ ಗಂಗೆಯ ಮಿಂದಡಿಲ್ಲ.
ತುಟ್ಟ ತುದಿಯ ಮೇರು ಗಿರಿಯ ಮೆಟ್ಟಿ ಕೂಗಿದಡಿಲ್ಲ.
ನಿತ್ಯ ನೇಮದಿಂದ ತನುವ ಸುಟ್ಟು ಕೊಂಡರಿಲ್ಲ.
ನಿಚ್ಚಕ್ಕೆ ನಿಚ್ಚ ನೆನೆವ ಮನವ ಅಂದಂದಿಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚಬರಿಯ ಬಯಲು ಗುಹೇಶ್ವರ ಲಿಂಗವು.

ತನ್ನ ಮನಸ್ಸನ್ನು ತಾನರಿಯದೇ ಏನೇ ಮಾಡಿದರೂ ಯಾವುದೇ ರೀತಿಯಿಂದ ತನು ಬಳಲಿಸಿದರೂ ಯಾವುದೇ ಪ್ರಯೋಜನವಿಲ್ಲ. ಬಯಲ ಸ್ವರೂಪವಾದ ಲಿಂಗದೇವನನ್ನು ಅರಿಯಲು ಹರಿಯುವ ಮನ ನಿಲ್ಲಬೇಕು, ಅದು ಲಿಂಗದೇವನಲ್ಲಿ ಸಲ್ಲಬೇಕು. ಮನವನ್ನು ಮಹದಲ್ಲಿ ನಿಲ್ಲಿಸಿ, ಮನೋರ್ಲಯಗೊಳಿಸಿ, ತನ್ನತಾನರಿದು ಲಿಂಗದೇವನ ದರ್ಶನ ಮಾಡಿಸುವ ಅತ್ಯಂತ ಸರಳ ಸುಲಭವಾದ ಸಾಧನವೇ ಇಷ್ಟಲಿಂಗ ಯೋಗ.

ಮನಸ್ಸನ್ನು ಅರಿಯಲಿಕ್ಕೆ ಅದನ್ನು ನಿಗ್ರಹಿಸಲಿಕ್ಕೆ ಅನೇಕ ಮಾರ್ಗಗಳಿವೆ; ಹಲವಾರು ಯೋಗಗಳಿವೆ. ಧ್ಯಾನಯೋಗ, ಪ್ರಾಣಾಯಾಮ ಅಷ್ಟಾಂಗಯೋಗ ಮುಖ್ಯವಾದವು. ಆದರೆ ಸಾಮಾನ್ಯ ಮನುಷ್ಯನಿಗೆ ಇವುಗಳನ್ನು ಆಚರಿಸಲು ಕಷ್ಟ. ಈ ಯೋಗಗಳಲ್ಲಿ ಭಕ್ತಿಯ ಲೇಪನವಿಲ್ಲ. ಅದಕ್ಕಾಗಿಯೇ ಗುರು ಬಸವಣ್ಣನವರು ಇಷ್ಟಲಿಂಗ ಯೋಗವನ್ನು ಕೊಟ್ಟರು ಎಂದು ಮೈಲಾರದ ಬಸವಲಿಂಗ ಶರಣರು ಗುರುಕರುಣ ತ್ರಿವಿಧಿಯಲ್ಲಿ ಈ ರೀತಿ ಹೇಳಿದ್ದಾರೆ.

ಮೌನಗೊಂಡಿರುತಿರ್ಪ ಧ್ಯಾನ ಯೋಗವ ಬಿಡಿಸಿ।
ನೀನಿಷ್ಟಲಿಂಗ ಧ್ಯಾನಯೋಗದೊಳಿರಿಸಿದೈ।
ಮೌನಿ ಶ್ರೀಗುರುವೆ ಕೃಪೆಯಾಗು।

ಪ್ರಾಣಾಯಾಮದ ಯೋಗ ತ್ರಾಣ ಗುಂದುವುದೆಂದು
ಮಾಣಿಸಿ ಮುಕ್ತಿಯ ಪ್ರಾಣಲಿಂಗವನಿತ್ತ।
ಜಾಣ ಶ್ರೀಗುರುವೆ ಕೃಪೆಯಾಗು।

ಕೇವಲ ಪ್ರಾಣಾಯಾಮ ಮಾಡುವುದರಿಂದ ದೇಹ ಶುದ್ಧಿಯಾಗಬಹುದೇ ಹೊರತು ಮನಸ್ಸು ಶುದ್ಧಿಯಾಗುತ್ತೆ ಎಂದು ಹೇಳಲಿಕ್ಕಾಗುವುದಿಲ್ಲ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಹಾರ,

ಧ್ಯಾನ ಧಾರಣ ಸಮಾಧಿ ಎನ್ನುವ ಅಷ್ಟವಿಧಗಳನ್ನೊಳಗೊಂಡ ಅಷ್ಟಾಂಗಯೋಗ ಬಲು ಕಷ್ಟವಾದುದು. ಯಮದಲ್ಲಿ ಮತ್ತೆ ಬ್ರಹ್ಮಚರ್ಯ, ಆಸ್ತೇಯ, ಅಪರಿಗ್ರಹ ಎನ್ನುವ ನಿಯಮಗಳಿವೆ ಎಲ್ಲರೂ ಬ್ರಹ್ಮಚಾರಿಗಳಾಗಿರಲಿಕ್ಕೆ ಹೇಗೆ ಸಾಧ್ಯ?

ಅಷ್ಟಾಂಗಯೋಗ ಬಲುಕಷ್ಟವೆಲೊ ಮಗನೆ।ಎಂ
ದಿಷ್ಟಲಿಂಗವನು ಸೃಷ್ಟಿಸಿ। ಕರಕಿತ್ತ
ಶ್ರೇಷ್ಠ ಶ್ರೀಗುರುವೆ ಕೃಪೆಯಾಗು।

ಇನ್ನೂ ಹಲವಾರು ಯೋಗಗಳಿವೆ. ಆದರೆ ಅವುಗಳಿಂದ ಫಲವಿಲ್ಲ ಹಾಗೂ ಆಚರಿಸಲು ಕಷ್ಟದಾಯಕವಾದವುಗಳು.

ಹಲವು ಯೋಗವ ಮಾಡಿ ಫಲವೇನು ಮಗನೆ।ಎಂ
ದೊಲಿದು ಲಿಂಗಾಂಗ ಸುಲಭಯೋಗವ। ನೋಡ
ಕಲಿಸಿದ ಗುರುವೆ ಕೃಪೆಯಾಗು।

ಹಾಗಾದರೆ ಇಂಥ ಸುಲಭಯೋಗವಾದ ಇಷ್ಟಲಿಂಗಯೋಗವನ್ನು ಮಾಡುವ ವಿಧಾನ ಯಾವುದು? ಇದಕ್ಕೆ ಉತ್ತರವನ್ನು ಕಂಡುಕೊಳ್ಳಲು ಚಾಮರಸನ ಪ್ರಭುಲಿಂಗ ಲೀಲೆಗೆ ಹೋಗೋಣ.

ಹೇಳುವೊಡೆ ಮನವೆಂಬ ಹಕ್ಕಿಗೆ
ಕಾಲುಗಳೇಲ್ಲೈ ತೊಳಲುತಿಹ ಕಣ್ಣಾಲಿಗಳು
ದಿಟವದಕೆ ಪಕ್ಕಗಳೀಡೆ ಪಿಂಗಳವ
ಗಾಳಿಯಾಗಿಹುದಂತು ಕಾರಣ
ಆಲಿಯೇ ಸಾಧನಕೆ ಸಾಧನ
ಮೂಲವನು ನಿಲಿಸುವವನೆ ಭಕ್ತನು ಬಸವ ಕೇಳೆಂದ

ಮನಸ್ಸು ಒಂದು ಹಕ್ಕಿ ಇದ್ದ ಹಾಗೆ, ಕಣ್ಣುಗ್ಗಳೇ ಇದರ ಕಾಲುಗಳು. ಏಕೆಂದರೆ ಕಣ್ಣುಗಳು ಹೋದಲೆಲ್ಲ ಮನಸ್ಸು ಹೋಗುತ್ತದೆ. ನಮ್ಮ ಈಡಾ ಪಿಂಗಳದಲ್ಲಿ ಹರಿಯುವ ಗಾಳಿಯೇ ಮನಸ್ಸಿನ ರೆಕ್ಕೆಗಳು. ಈ ಗಾಳಿಯನ್ನು ಕ್ರಮಬದ್ಧ ರೀತಿಯಲ್ಲಿ ಹರಿಯುವಂತೆ ಮಾಡಿ, ನಮಗೆ ಬೇಕಾದ ಕಡೆ ನಮ್ಮ ಮನಸ್ಸೆಂಬ ಹಕ್ಕಿ ಹಾರುವಂತೆ ಮಾಡಬಹುದು; ಅದಕ್ಕಾಗಿ ಮೊದಲು ಮನಸ್ಸಿನ ಕಾಲುಗಳಾದ ಕಣ್ಣಾಲಿಗಳನ್ನು ಬಂಧಿಸಬೇಕು ಅರ್ಥಾತ್ ಕಣ್ಣಾಲಿಗಳನ್ನು ಒಂದು ಕಡೆ ನಿಲ್ಲುವಂತೆ ಮಾಡಬೇಕು.

ಆಲಿ ನಿಂದೊಡೆ ಸುಳಿದು ಸೂಸುವ ಗಾಳಿ ನಿಲುವುದು
ಗಾಳಿ ನಿಲೆ ಮನ ಮೇಲೆ ನಿಲುವುದು
ಮನವು ನಿಂದೊಡೆ ಬಿಂದು ನಿಂದಿಹುದು
ಲೀಲೆಯಿಂದ ಬಿಂದು ನಿಂದೊಡೆ
ಕಾಲ ಕರ್ಮವ ಗೆದ್ದು ಮಾಯೆಯ
ಹೇಳ ಹೆಸರಿಲ್ಲೆನಿಸಬಹುದೈ ಬಸವ ಕೇಳೆಂದ.

ಎಲ್ಲದಕ್ಕೂ ಮೊದಲು ನಮ್ಮ ಕಣ್ಣಾಲಿಗಳು ನಿಲ್ಲಬೇಕು. ಕಣ್ಣಾಲಿಗಳು ನಿಂತರೆ ಈಡಾ ಪಿಂಗಳ ನಾಡಿಗಳಲ್ಲಿ ಸಂಚರಿಸುವ ಗಾಳಿ ಕ್ರಮಬದ್ಧವಾಗುತ್ತದೆ. ಈ ರೀತಿ ಗಾಳಿ ಕ್ರಮಬದ್ಧವಾದೊಡನೆ ಮನಸ್ಸು ತನ್ನ ಮೂಲ ಸ್ವಭಾವವಾದ ಚಂಚಲತೆಯನ್ನು ಬಿಟ್ಟು ಶಾಂತವಾಗುತ್ತದೆ, ಲಿಂಗದೇವನಲ್ಲಿ ನೆಲೆಗೊಳ್ಳುತ್ತದೆ. ಮಹದಲ್ಲಿ ನಿಂದು ಮನೋರ್ಲಯವಾಗುತ್ತದೆ.

ಹಾಗಾದರೆ ಈ ಕಣ್ಣಾಲಿಗಳನ್ನು ನಿಲ್ಲಿಸುವುದು ಹೇಗೆ? ಇದರಿಂದ ದಿವ್ಯ ಶಕ್ತಿಯನ್ನು ಪಡೆದು 12ನೇ ಶತಮಾನದ ಶರಣರಂತೆ ಜ್ಞಾನ ಪಡೆದುಕೊಳ್ಳುವುದು ಹೇಗೆ ಎನ್ನುವುದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

(ಮುಂದುವರೆಯುವುದು....)

☹ ಸಮಸ್ಯೆ? – ಸಮಾಧಾನ ! ☺

□ ದೇವಿಕಾ ಶರಣಪ್ಪ,ಬಸವೇಶ್ವರ ನಗರ, ಬೆಂಗಳೂರು

? ಸಂಭಾವ್ಯ ಸತ್ಯಗಳು ಎಂದರೇನು ? ತಾವು ತಾವೇ ಕಲ್ಪಿಸಿಕೊಂಡು ಯಾರ ಬಗ್ಗೆ ಏನು ಬೇಕಾದರೂ ಬರೆಯಬಹುದೆ?

★ ಎಂ.ಪಿ.ಪ್ರಕಾಶರ ತಂದೆ ಶೈವಾಗಮಾಚಾರ್ಯ; ಅವರು ವಾಮಾಚಾರಿ, ತಾಂತ್ರಿಕರು. ಹಿಂದೆ ಶೈವಾಗಮಾಚಾರ್ಯರು ಕೀಳು ಜಾತಿಯ ಹೆಂಗಸರೊಡನೆ ಸಂಬಂಧ ಇಟ್ಟುಕೊಂಡು ಮಕ್ಕಳನ್ನು ಪಡೆಯುವಂತೆ ಇವರೂ ಅನೇಕ ಮಕ್ಕಳನ್ನು ಹೆತ್ತರು. ಅದರಲ್ಲಿ ಪ್ರಮುಖರು ಎಂ.ಪಿ.ಪ್ರಕಾಶ್. ಅದೇ ರೀತಿ ಅದೇ ವಾಮಾಚಾರಿ ತಂದೆಯಿಂದಲೇ ಕೀಳು ಕುಲದ ಹೆಣ್ಣಿನಲ್ಲಿ ಹುಟ್ಟಿದ ಅಕ್ರಮ ಸಂತಾನ ಬಂಜಗೆರೆ ಜಯಪ್ರಕಾಶ. ಆ ಅನಾಮಿಕ ತಾಯಿಯ ನೆನಪಿಗಾಗಿಯೇ ಜಯ ಎನ್ನುವ ಹೆಸರನ್ನು ಇಟ್ಟಿರುವುದು. ಇಬ್ಬರೂ ಪ್ರಕಾಶರೂ ಒಂದೇ ತಂದೆಯ ಮಕ್ಕಳು. ಅದಕ್ಕಾಗಿಯೇ ತಮ್ಮ ಪ್ರಕಾಶನಿಗೆ ಸಂಕಷ್ಟ ಬಂದಾಗ ಅಣ್ಣ ಪ್ರಕಾಶ ತಮ್ಮ ಗೃಹ ಮಂತ್ರಿಯ ಅಧಿಕಾರವನ್ನು ಬಳಸಿಕೊಂಡು ರಕ್ಷಣೆ ನೀಡಿ ಭ್ರಾತೃ ಪ್ರೇಮವನ್ನು ಪ್ರದರ್ಶಿಸಿದರು. ಇದೊಂದು ಸಂಭಾವ್ಯ ಸತ್ಯ; ನಾವೇನು ಇದನ್ನೇ ನಿರ್ಣಯವೆಂದು ಹೇಳುತ್ತಿಲ್ಲ. ಇದು ಸಂಶೋಧನೆಗೆ ಅರ್ಹವಾದ ಮಹತ್ವಪೂರ್ಣ ವಿಷಯ ಎಂದಷ್ಟೆ ಹೇಳುತ್ತಿರುವುದು.

ರಂಭಾಪುರಿ ಶ್ರೀಗಳು ಬಂಜಗೆರೆ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಗತ್ಯವಿಲ್ಲ. ಬಸವಣ್ಣನವರ ಜನ್ಮ ಜಾತಿ ಮುಖ್ಯವಲ್ಲ ಎಂದಿದ್ದಾರೆ. ಇದರಲ್ಲಿಯೂ ಒಂದು ಸಂಭಾವ್ಯ ಸತ್ಯ ಕಾಣಬರುತ್ತಿದೆ. ಜಂಗಮರು ಎಂದು ಹೇಳಿಕೊಳ್ಳುವವರು ಉತ್ತರ ಕರ್ನಾಟಕದಲ್ಲಿ ಅಯ್ಯ ಎನ್ನುವ ಪದ ತಮ್ಮ ಹೆಸರಿನೊಡನೆ ಸೇರಿಸಿಕೊಳ್ಳುತ್ತಾರೆ. ಮಲ್ಲಯ್ಯ, ಸಂಗಯ್ಯ, ಶಿವಯ್ಯ ಇತ್ಯಾದಿ ಈ ಅಯ್ಯ ಪದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಮಾದಾರ ಧೂಳಯ್ಯ ಇವರ ಹೆಸರಿನೊಡನೆ ಸಾಗಿ ಬಂದಿರುವುದನ್ನು ಕಾಣುತ್ತೇವೆ. ಆದ್ದರಿಂದ ಇಂದಿನ ಜಂಗಮರೆಲ್ಲ ಮೂಲತಃ ದಲಿತರೆ. ಅದಕ್ಕಾಗಿಯೇ ಜನ್ಮತಃ ಜಂಗಮರಾದ ರಂಭಾಪುರಿ ಶ್ರೀಗಳು ದಲಿತ ಮೂಲದವರಾದ ಕಾರಣ ಬಂಜಗೆರೆ ಪುಸ್ತಕವನ್ನು ಸಮರ್ಥಿಸಿಕೊಂಡಿದ್ದಾರೆ; ಮುಟ್ಟುಗೋಲು ಬೇಡವೆಂದಿದ್ದಾರೆ. ಜಂಗಮರೆಲ್ಲ ಮೂಲತಃ ದಲಿತ ವರ್ಗದವರೆ ಎಂಬ ಸಂಭಾವ್ಯ ಸತ್ಯ ಸಂಶೋಧನೆಗೆ ಅರ್ಹವಾಗಿದೆಯಲ್ಲವೆ?

□ ಲೀಲಾವತಿ ನಾಡಗೌಡ, ಮಹಾಲಕ್ಷ್ಮಿ ಪುರಂ, ಬೆಂಗಳೂರು

? ಕನ್ನಡ ಸಾಹಿತ್ಯ ಪರಿಷತ್ತಿನ ಅಧಿಕೃತ ಪತ್ರಿಕೆ ಕನ್ನಡ ನುಡಿಯಲ್ಲಿ ಅಧ್ಯಕ್ಷರಾದ ಚಂಪಾ ಅವರು ಭೈರಪ್ಪನವರ ಆವರಣ ಮತ್ತು ಬಂಜಗೆರೆ ಜಯಪ್ರಕಾಶರ ಪುಸ್ತಕ ಸಾಹಿತ್ಯಕ ಕಕ್ಷೆಯನ್ನು ಮೀರಿ ವಿವಾದಾಸ್ಪದ ಆದ ಮೇಲೆ ಹಿಂದಿನ ಮಾರಾಟದ ದಾಖಲೆಗಳನ್ನು ಮೀರಿ ಮಾರಾಟವಾಗುತ್ತಿವೆ ಎಂದು ಅಭಿಮಾನ ಪಟ್ಟಿದ್ದಾರಲ್ಲ?

★ ಓತಿಕಾಟಕ್ಕೆ ಬೇಲಿ ಸಾಕ್ಷಿ ಎಂಬಂತೆ ಚಂಪಾ ಸಹಿತ ನಾಸಿಕ ಸಾಹಿತಿಯಲ್ಲವೆ? ಅಗ್ಗದ ಪ್ರಚಾರ ಪಡೆದು, ಪುಸ್ತಕ ಮಾರಾಟ ವೃದ್ಧಿಸಿಕೊಳ್ಳಬೇಕು ಎಂಬ ತಂತ್ರದಿಂದಲೇ ಬಂಜಗೆರೆ ಮಾಡಿದ್ದು, ಚಂಪಾಗಿಂತಲೂ ಬುದ್ಧಿವಂತರೇ ಸರಿ. ಕಳ್ಳನೊಬ್ಬ ಕಳವಿನ ಮಾಲಿನೊಡನೆ ಸಿಕ್ಕಿಬಿದ್ದಾಗ ಸಾರ್ವಜನಿಕರು ಹಿಡಿದು ಚನ್ನಾಗಿ ಉಗುಳಿದಾಗ,"ಚಿಂತೆಯಿಲ್ಲ ಯಾರಿಗೂ ಗೊತ್ತಾಗದ ಅನಾಮಿಕ ನಾನಾಗಿದ್ದೆ. ಎಲ್ಲರಿಂದ ಉಗುಳಿಸಿಕೊಂಡರೂ ಪರವಾಗಿಲ್ಲ."ನಾನು ಎಲ್ಲರ ಗಮನಕ್ಕೆ ಬಂದಿದ್ದೇನೆ. ಎಂಬಂತಿದೆ ಈ ಪ್ರಸಂಗ .

□ ಸಿ.ಎಂ.ರಾಜಣ್ಣ ಲಿಂಗಾಯತ್, ಇಂಜಿನಿಯರ್, ಚಳ್ಳಕೆರೆ

? ಇತ್ತೀಚೆಗೆ ಸಿಖ್ ಸಮುದಾಯದ ಢೇರಾ ಸಚ್ಚಾ ಸೌಧ ಎಂಬ ಪಂಥದ ಮುಖಂಡರೋರ್ವರು ಶ್ರೀಗುರು ಗೋವಿಂದ ಸಿಂಗರಂತೆ ವೇಷಭೂಷಣ ಹಾಕಿಕೊಂಡು ತೀರ್ಥ ಪ್ರಸಾದ ನೀಡಿದ್ದು ತಪ್ಪೆ? ಇದನ್ನು ಪ್ರತಿಭಟಿಸಿ ಸಿಖ್ ಸಂಪ್ರದಾಯವಾದಿಗಳು ಉಗ್ರ ಹೋರಾಟ ಮಾಡಿದರಲ್ಲ ಇದು ಸರಿಯೆ?

★ ಗುರುನಾನಕರು ಒಂದು ಅಧ್ಯಾತ್ಮಿಕ ಹಿನ್ನೆಲೆಯ ಪಂಥವನ್ನು ಸ್ಥಾಪಿಸಿದರು. ಅದು ಮುಂದೆ ಎಲ್ಲ ಅಗತ್ಯ ಅಂಶಗಳನ್ನು ಹೊಂದಿ ಒಂದು ಧರ್ಮವಾಯಿತು. ಇದನ್ನು ಅನುಸರಿಸುವ ಸಮಾಜವೂ ಬೆಳೆಯಿತು. ಸ್ವಹಿತಾಸಕ್ತರು ಸ್ವಾರ್ಥಿಗಳೂ ಆದ ಕೆಲವು ಧಾರ್ಮಿಕ ನೇತಾರರು ಸಿಖ್ ಸಮಾಜದಲ್ಲಿ ಮತ್ತೆ ಒಳ ಪಂಥಗಳನ್ನು ಬೆಳಸ ತೊಡಗಿದರು. ವ್ಯಕ್ತಿಗತ ಪಂಥಗಳ ಬೆಳೆದಂತೆ ಸಮಾಜವು ದುರ್ಬಲವಾಗುವುದು. ಭಕ್ತಿ-ನಿಷ್ಠೆಗಳು ವ್ಯಕ್ತಿಗಳ ಸುತ್ತ ಕೇಂದ್ರೀಕೃತವಾಗಿ ಅಖಂಡತೆ ಉಳಿಯುವುದಿಲ್ಲ. ಇದಕ್ಕೆ ಜ್ವಲಂತ ಉದಾಹರಣೆ

ಲಿಂಗಾಯತ ಸಮಾಜ.

ಇದೇ ಪರಿಸ್ಥಿತಿ ಗುರು ನಾನಕರು ಸ್ಥಾಪಿಸಿದ ಸಿಖ್ ಸಮಾಜದಲ್ಲೂ ಉಂಟಾದಾಗ ಗುರು ಗೋವಿಂದ ಸಿಂಗ್ ಕೆಲವು ನಿಯಮಗಳನ್ನು ತಂದರು. ದಶಗುರು ಪರಂಪರೆಯನ್ನು ಆರಂಭಿಸಿದರಲ್ಲದೆ, ಗುರು ಗ್ರಂಥವಾದ ಗ್ರಂಥ ಸಾಹೇಬ ಒಂದನ್ನೇ ಮನ್ನಿಸಬೇಕು. ಅದಕ್ಕೆ ಪರಮೋನ್ನತ ಸ್ಥಾನವಿರಬೇಕು ಎಂದರು. ಎಲ್ಲಕ್ಕಿಂತ ಮಿಗಿಲಾಗಿ ವೀರತ್ವ-ಶೂರತ್ವಗಳನ್ನು ಜನರಲ್ಲಿ ಬೆಳೆಸಿದರು. ವಚನ ಸಾಹಿತ್ಯದಲ್ಲಿ ಶರಣನ ಪರಿಕಲ್ಪನೆ ಬರುವಂತೆ ಸಿಖ್ಖರಲ್ಲಿ ಕೆಲವು ಆದರ್ಶಗಳಿವೆ. ಬೇರೆ ಎಲ್ಲ ಧಾರ್ಮಿಕ ಸಮುದಾಯಗಳಿಗಿಂತ ಒಂದು ಒಳ್ಳೆಯ ಸಮಾಜವಾಗಿ ರೂಪುಗೊಂಡಿದೆ. ಕಾಯಕ ನಿಷ್ಠೆ, ಪ್ರಾಮಾಣಿಕತೆ, ದಾಸೋಹ ಪ್ರವೃತ್ತಿ, ಭಕ್ತಿ, ದೇಶಾಭಿಮಾನ, ಪರಾಕ್ರಮ, ಕ್ರೀಡಾ ಪರಿಣತಿ - ಹೀಗೆ ಒಂದು ಉಲ್ಲೇಖನೀಯ ಸಮಾಜವಾಗಿದೆ. ಇದಕ್ಕೆ ಕಾರಣ ಅವರ ಧರ್ಮ ನಿಷ್ಠೆ; ಪುನಃ ಈ ಸಮಾಜವನ್ನು ಒಡೆಯುವಂತೆ ಕೆಲವರು ವ್ಯಕ್ತಿಗಳು ವ್ಯಕ್ತಿ ಪಂಥ (Personal cult) ಗಳನ್ನು ಬೆಳೆಸಲು ಯತ್ನಿಸುವರು. ಉದಾ: ನಿರಂಕಾರಿ ಪಂಥ. ಇದೇ ತೆರನ ಒಂದು ಪಂಥ ಢೇರಾ ಸಚ್ಚಾ ಸೌಧ. ತಾನು ಗುರು ಗೋವಿಂದ ಸಿಂಗರಂತೆ ವೇಷ ಹಾಕಿ, ಪ್ರದರ್ಶಿಸಿಕೊಳ್ಳುವ ಅಗತ್ಯವೇನಿತ್ತು? ಇಂಥವರು ಅಖಂಡ ಸಮಾಜವನ್ನು ಒಡೆಯುವರಲ್ಲ ಎಂಬ ಆತಂಕದಿಂದ ಸಿಖ್ಖರು ಉಗ್ರವಾಗಿ ಪ್ರತಿಭಟಿಸುವರು.

ಇದು ಸರಿಯೆ? ಎಂಬುದು ಎರಡನೆ ಪ್ರಶ್ನೆ. ಲಿಂಗಾಯತರಿಗಂತೂ ಇದು ಎಷ್ಟೂ ಸರಿ ಕಾಣದು. ಏಕೆಂದರೆ ಇವರಲ್ಲಿ ಧರ್ಮಗುರುವಿನಲ್ಲಿ ನಿಷೆಯಿಲ್ಲ, ಒಗ್ಗಟ್ಟು ಮೊದಲೇ ಇಲ್ಲ. ಅಭಿಮಾನವಂತೂ ಶೂನ್ಯ, ಹೋರಾಟದ ಮನೋಭಾವವಿಲ್ಲ. ಕೇವಲ ತಮ್ಮ ವೈಯಕ್ತಿಕ ಸುಖ ಭೋಗ ಸಂಪಾದನೆ ಕಡೆಗೆ ಲಕ್ಷ್ಯವೇ ವಿನಾ ಧರ್ಮ ರಕ್ಷಣೆಯ ಕಡೆಗೆ ಇಲ್ಲ. ಹಾಗಾಗಿ ಇವರಿಗೆ ಅದು ಸರಿ ಕಾಣಲಿಕ್ಕಿಲ್ಲ. ಆದರೆ ಯಾರು ಧರ್ಮವನ್ನು ಕಟ್ಟಿರುತ್ತಾರೋ ಉದಾ: ವಿಶ್ವಗುರು ಬಸವಣ್ಣನವರು, ಯಾರು ಧರ್ಮವನ್ನು ಸಂರಕ್ಷಿಸುತ್ತಾರೋ ಅಂಥವರಿಗೆ ಧೂರ್ತರಿಂದ ಅವಮಾನವಾದಾಗ, ಅವ ಹೇಳನವಾದಾಗ ಹೋರಾಡುವುದು ಎಲ್ಲ ದೃಷ್ಟಿಯಿಂದಲೂ ಸರಿಯೇ ಸರಿ! ಅದುವೆ ಗಣಾಚಾರ!!

□ ವೀರೇಶ್ ತಿಮ್ಮಪ್ಪಯ್ಯನ ಹಳ್ಳಿ, ಕುಂಬಳಗೋಡು.

? ಡಾ||ಪಿ.ವಿ.ನಾರಾಯಣರಿಗೆ ಅವರ ವಚನ - ನಿರ್ವಚನ ಕೃತಿಗೆ ಬಸವ ಸಮಿತಿ ಪುರಸ್ಕಾರ ಕೊಡಲು ಹೊರಟಾಗ ನಂತರ ಮಹಾಚೈತ್ರ ಪುಸ್ತಕ ಪತ್ರವಾದಾಗ ಅದನ್ನು ತಡೆಯಲು ಆಯಾ ಪುಸ್ತಕಗಳ ಸಮಗ್ರ ವಿಮರ್ಶೆ ಬರೆದಿರಿ. ಈಗೇಕೆ ಆನು ದೇವಾ ಹೊರಗಣವನು ಪುಸ್ತಕದ ಬಗ್ಗೆ ಸಮಗ್ರವಾದ ವಿಮರ್ಶಾತ್ಮಕ ಲೇಖನ ಬರೆಯಲಿಲ್ಲ?

★ ನೂರಾರು ತಪ್ಪುಗಳು,ಪ್ರಮಾದಕರ ಅಂಶಗಳು, ಕೀಳು ಕಲ್ಪನೆಗಳು ತುಂಬಿರುವ ಪ್ರಸ್ತುತ ಪುಸ್ತಕದ ಬಗ್ಗೆ ವಿಮರ್ಶೆ ಬರೆದರೆ ಪುಸ್ತಕದ ಗಾತ್ರಕ್ಕಿಂತಲೂ ವಿಮರ್ಶೆಯೇ ದೊಡ್ಡದಾಗುತ್ತದೆಂಬ ಆತಂಕದಿಂದ, ಪುಸ್ತಕ ವಿಮರ್ಶೆ ಬರೆಯಬೇಕಾದರೆ ಬಂಜಗೆರೆ ಪುಸ್ತಕದೊಳಗಿರುವ ಕುತ್ಸಿತ ವಿಚಾರ, ನಿಂದಾತ್ಮಕ ಪದಗಳನ್ನು ಕೈಯಾರೆ ಉಲ್ಲೇಖಿಸಬೇಕಾಗುತ್ತದೆ. ಇದರಿಂದ ಆತನನ್ನು ಸುತ್ತುವ ಪಾಪ ನಮ್ಮನ್ನು ಸುತ್ತೀತು ಎಂದು ಪುಸ್ತಕ ವಿಮರ್ಶೆಯನ್ನು ನಾನು ಬರೆಯಲಿಲ್ಲ.

□ ವೀರೇಶ್ ಹಲ್ಕಿ, ಬೈಲಹೊಂಗಲ

? ಭಾವೀ ರಾಷ್ಟ್ರಾಧ್ಯಕ್ಷೆ ಪ್ರತಿಭಾ ಪಾಟೀಲ್ ಮೌಂಟ್ ಅಬೂಗೆ ಹೋಗಿದ್ದರಂತೆ ಆಗ ಬ್ರಹ್ಮಕುಮಾರಿ ಸಂಸ್ಥೆಯ ಮುಖ್ಯಸ್ಥೆ ಹೃದಯ ಮೋಹಿನಿ ಅವರಲ್ಲಿ ಬಾಬಾ ಲೇಖರಾಜ ಆನಂದರ ಆತ್ಮ ಪ್ರವೇಶಿಸಿ, ವಾಣಿಯನ್ನು ನೀಡಿತಂತೆ; ನೀವು ಮುಂದೆ ದೊಡ್ಡ ಜವಾಬ್ದಾರಿ ನಿರ್ವಹಿಸುವುದಿದೆ ಎಂದು ಬಾಬಾ ಅವರ ಆತ್ಮ ಹೃದಯ ಮೋಹಿನಿ ಅವರ ಮೂಲಕ ಹೇಳಿತಂತೆ. ಇದು ನಿಜವೆ?

★ ಇಂಥ ಇನ್ನೂ ಅವೈಜ್ಞಾನಿಕ ನಂಬಿಕೆಗಳು ಬ್ರಹ್ಮಕುಮಾರಿ ಪಂಥದಲ್ಲಿವೆ. ದೈವೀ ಜ್ಞಾನವನ್ನು ಹೊಂದಿದ ಮಹಾತ್ಮರು ಭವಿಷ್ಯ ಸೂಚಕ ಮಾತು ಹೇಳುತ್ತಾರೆ ಎಂದರೆ ಸಾಕು. ಅದಕ್ಕೆ ಮಹತ್ವ ತರಿಸಲು ಬೇರೊಂದು ಆತ್ಮ ಪ್ರವೇಶಿಸಿ ಹೇಳುತ್ತೆ ಎಂದೇ ಹೇಳಬೇಕು? ಈಗಾಗಲೇ ಸಾವಿರಾರು ವರ್ಷಗಳ ಮಾನವ ಇತಿಹಾಸದ ದಾಖಲೆ ನಮ್ಮ ಮುಂದಿರುವಾಗ ಯುಗಗಳು ಐದು ಸಾವಿರ ವರ್ಷಗಳಿಗೊಮ್ಮೊಮ್ಮೆ ತಿರುಗಿ ಬರುತ್ತವೆ ಎಂದು ಬ್ರಹ್ಮಕುಮಾರಿ ಮಾರ್ಗದಲ್ಲಿ ಹೇಳಲಾಗುವುದು.ವಿದ್ಯಾವಂತರು, ದೊಡ್ಡ ಸ್ಥಾನದಲ್ಲಿ ಇರುವವರು ಮುಂತಾದವರೆಲ್ಲ ವೈಚಾರಿಕ ನಿಲುವಿನವರು ಎಂದು ಹೇಳಲು ಬರುವುದಿಲ್ಲ.

ಆನು ಮರುಗುವೆನಯ್ಯಾಕೂಡಲ ಸಂಗಮ ದೇವಾ

ಉಂಡುದು ಬಂದಿತ್ತೆಂಬ ಸಂದೇಹಿ ಮಾನವ ನೀಕೇಳಾ
ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ
ಉಂಡುದು ಆಗಳೇ ಅಪೇಯವಾಯಿತು.
ಆ ಉಂಡುದನುಣ ಬಂದ ಹಂದಿಯ ಬಾಳುವೆಯವರ ಕಂಡು
ಆನು ಮರುಗುವೆನಯ್ಯಾ ಕೂಡಲ ಸಂಗಮದೇವಾ.

ಅಗ್ಗದ ಪ್ರಚಾರ, ದಿನ ಬೆಳಗಾದ ಕೂಡಲೇ ದಿಢೀರನೆ ಖ್ಯಾತ ಸಂಶೋಧಕನಾಗಬೇಕೆಂಬ ತೆವಲು ಹಾಗೂ ಶೀಲ-ಅಶ್ಲೀಲಗಳ ಕುತೂಹಲಕ್ಕೆ ಹಾರಿಬೀಳುವ ಓದುಗರ ಹಣಕ್ಕೆ ಬರೆದಿರುವ ಬಂಜಗೆರೆ ಜಯಪ್ರಕಾಶರ "ಆನು ದೇವಾ ಹೊರಗಣವನು" ಎಂಬ ಸ್ವಯಂ ಘೋಷಿತ ಸಂಶೋಧನೆಯ ಪುಸ್ತಕ,ಮೇಲಿನ ವಚನಕ್ಕೆ ತಕ್ಕ ಉದಾಹರಣೆ.

ಬೆನ್ನುಡಿ ಬರೆದು ಬೆನ್ನು ಚಪ್ಪರಿಸಿದ ಇಂದೂಧರ ಹೊನ್ನಾಪುರ ಅವರು ಬೆನ್ನು ಚಪ್ಪರಿಸುವ ಭರಾಟೆಯಲ್ಲಿ ಸಂಶೋಧನೆಗಳು ಕೇವಲ ಕಾಪಿ-ಪೇಸ್ಟ್ ಅನುವ ಸ್ಥಿತಿ ಮುಟ್ಟಿರುವಾಗ, ವಿಶ್ವವಿದ್ಯಾಲಯದ ವಿದ್ವಾಂಸರು ಮಾಡಬೇಕಾದ ಕೆಲಸವನ್ನು ಸಾರ್ವಜನಿಕ ಬದುಕಿನಲ್ಲಿದ್ದುಕೊಂಡು ಬಂಜಗೆರೆ ಮಾಡಹೊರಟಿರುವುದು ನಿಜಕ್ಕೂ ಅದ್ಭುತ ಎಂದು ಬರೆಯುವ ಮುನ್ನ ಈ 56 ಟಿಪ್ಪಣಿಗಳ "ಕಾಪಿ-ಪೇಸ್ಟ್" ಸಾಹಿತ್ಯದ ಬಗ್ಗೆ ಗಮನಿಸಬೇಕಾಗಿತ್ತು.

ಮುನ್ನುಡಿ ಬರೆದು ಜೋಗುಳ ಹಾಡಿರುವ ಪ್ರೊ.ಜೋಗನ್ ಶಂಕರ್ ಪ್ರಕಾರ ಸಂಶೋಧನೆ ಅಂದರೆ "ಬಂಜಗೆರೆಯವರ ಲೇಖನಗಳು ಅಗ್ನಿ ಪತ್ರಿಕೆಯಲ್ಲಿ ಪ್ರಕಟಗೊಂಡಾಗ ನಾನು ವಿದ್ವಾಂಸರಿಂದ ದೊಡ್ಡ ಪ್ರಮಾಣದಲ್ಲಿ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಿದ್ದೆ ಆದರೆ ನನ್ನ ನಿರೀಕ್ಷೆ ಹುಸಿಯಾಯಿತು". ಮುಂಬರುವ ದಿನಗಳಲ್ಲಿ ಅವರೆಲ್ಲ ಮೌನ ಮುರಿದು ಬಸವಣ್ಣನ ಜಾತಿ ಮೂಲದ ಬಗ್ಗೆ ಮತ್ತೆ ಸಂಶೋಧನೆಯ ಮಾತು ಕತೆಗಳ ಕಲರವ ಹರಡುವರೆಂಬ ಆಸೆ ನನ್ನದು. ಬಹುಶಃ ಈ ಕಲರವ ಅಂದರೆ ಏನು ಎಂಬುದು ಈಗ ಸ್ಪಷ್ಟವಾಗುತ್ತಲಿದೆ. ಹೋದ ವರುಷ ಇದೇ ಜೋಗನ್ ಮತ್ತು ಬಂಜಗೆರೆ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಶ್ರೀ ಬಸವೇಶ್ವರರ ಹೆಸರನ್ನು ಪುನರ್ ನಾಮಕರಣ ಮಾಡಲು ಸರಕಾರ ಘೋಷಿಸಿದಾಗ ದಲಿತನಲ್ಲದ ಬಸವೇಶ್ವರರ ಹೆಸರನ್ನು ಇಡಕೂಡದು, ಒಂದು ವೇಳೆ ಇಟ್ಟರೆ ಅದು ಲಿಂಗಾಯತೀಕರಣವಾಗುತ್ತದೆಂದು ಹುಯಿಲೆಬ್ಬಿಸಿ, ಇಂದು ಕಲರವದ ಅರ್ಥವನ್ನು ಈ ರೀತಿ ಬಹಿರಂಗಪಡಿಸುತ್ತಿರುವುದರ ಹಿಂದಿನ ನೀಚತನ ಈಗ ನಿಚ್ಚಳವಾಗತೊಡಗಿದೆ.

ಬಂಜಗೆರೆ ಜಯಪ್ರಕಾಶ್, ಅಂಬೇಡ್ಕರ್ ಮತ್ತು ಕುವೆಂಪು ಅವರ ಪಿತೃತ್ವ ಕುರಿತು ಬರೆದ ಬರವಣಿಗೆಯಲ್ಲಿ ನಮ್ಮ ಊಹೆಗೂ ನಿಲುಕದ, ನಾವು ಎಂದೂ ಕೇಳರಿಯದ ಮಾತುಗಳನ್ನು ಕುವೆಂಪು ಮತ್ತು ಅಂಬೇಡ್ಕರ್‌ರ ಕುರಿತು ಬರೆದ ಪ್ರಚಾರ ಮಾಡಿ, ಅದನ್ನು ಅನಾಮಧೇಯ ಕಿಡಿಗೇಡಿಗಳು ಹಬ್ಬಿಸಿದ ವದಂತಿ ಎಂದು ಬರೆದು, ತಾವು ಮಾತ್ರ ಅತ್ಯಂತ ಮುಗ್ಧರು, ವಿನಯವಂತರು ಎಂದು ತೋರಿಸಿಕೊಳ್ಳಲು ಈ ಕೆಳಗಿನಂತೆ ಸಾಲುಗಳನ್ನು ಬರೆಯುತ್ತಾರೆ.

"ಇದು ಕುತ್ಸಿತ ಮನೋಭಾವದ ಚಿಂತನೆ ಎಂಬುದು ಸಮರ್ಥವಾಗುವುದಾದರೂ ಇಂತಹ ಅಸತ್ಯಗಳನ್ನು ಕುಚೇಷ್ಟೆಗೆ ಪ್ರಚಲಿತ ಗೊಳಿಸುವವರ ಮನಃಸ್ಥಿತಿ ಯಾವ ಬಗೆಯದು? ಈ ಬಗೆಯ ಅಪವಾದಗಳನ್ನು ಮಾತನಾಡುವುದಕ್ಕೆ ಹಾಗೂ ಮಾತನಾಡುವ ವ್ಯಕ್ತಿಗಳು, ವ್ಯಕ್ತಿಗತವಾಗಿ ಕೆಡುಕರಾಗಿದ್ದರು ಎಂಬುದೊಂದೇ ಏಕೈಕ ಕಾರಣವಾಗಿರಲಾರವು". ದಯವಿಟ್ಟು ಬಂಜಗೆರೆಯವರ ಈ ಮಾತುಗಳನ್ನು ಶ್ರೀ ಬಸವೇಶ್ವರರ ತಾಯಿಯನ್ನು ಕುರಿತು ಬರೆದ ತಮ್ಮ ನೀಚ-ವಿಕೃತ ಸಾಲುಗಳಿಗೆ ಅನ್ವಯಿಸಿ ಕೊಳ್ಳಬೇಕೆಂದು ವಿನಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ.

ಅನಾಮಧೇಯರು ಕಿಡಿಗೇಡಿಗಳು ನೀಡುವ ವದಂತಿಗಳೇ ಬಂಜಗೆರೆಯವರ ಸಂಶೋಧನೆಯ

ವಸ್ತುಗಳಾದರೆ ಮುಂದೊಂದು ದಿನ ಕಾಲೇಜಿನ ಶೌಚಾಲಯದ ಗೋಡೆಗಳ ಮೇಲೆ ಬರೆಯುವ ಹುಡುಗಾಟದ ಸಾಲುಗಳು ಬಂಜಗೆರೆಯವರ ಹುಡುಕಾಟಕ್ಕೆ ಹೇರಳ ಸಾಮಾಗ್ರಿಯನ್ನೊದಗಿಸಬಹುದು. ಆಗಲೂ ಅವರು ಹೀಗೆ ಬರೆಯಬಹುದು:

"ನನಗೆ ದೊರೆಯುತ್ತಾ ಹೋದ ಸುಳುಹುಗಳು ಸ್ವಲ್ಪಮಟ್ಟಿಗೆ ಗೊಂದಲಕಾರಿಯಾದವುಗಳು ಎಂಬುದು ನಿಜವಾದರೂ ಒಂದು ಅನುಮಾನಿತ ಸತ್ಯವನ್ನು ಇಟ್ಟುಕೊಂಡು ನನ್ನ ಸಾಂಸ್ಕೃತಿಕ ಓದುವಿಕೆಯನ್ನು ಮುಂದುವರಿಸುವುದಕ್ಕೆ ಸಾಕಾಗುವಷ್ಟು ಸಾಮಾಗ್ರಿಯೇನೋ ಹೊಳೆಯಲು ಈಗ ಅದರ ದಾರಿಯಲ್ಲಿ ಹುಡುಕಾಡುತ್ತಿದ್ದೇನೆ.

ನಾನು ಇದನ್ನೆಲ್ಲಾ ಹೇಳಬೇಕಾಗಿಬಂದ ಕಾರಣವೇನೆಂದರೆ, ಸುಮ್ಮನೆ ವಿವಾದ ಹುಟ್ಟು ಹಾಕುವುದಕ್ಕೂ, ಹೊಣೆಯರಿತ ದಾರಿಯಲ್ಲಿ ಅನುಮಾನಿತ ಸತ್ಯವೊಂದನ್ನು ಆಧರಿಸಿಕೊಂಡು, ಅಧ್ಯಯನ ಮಾಡುವುದಕ್ಕೂ ಒಂದು ಅಂತರವಿದೆ ಎಂದು ನಾನು ನಂಬುತ್ತೇನೆ". ಬಹುಶಃ ಈ ಸಾಲುಗಳನ್ನು ಬಂಜಗೆರೆಯವರು ಆತ್ಮರತಿಗಾಗಿ ಬರೆದುಕೊಂಡಿರಬಹುದು. ಆದರೆ ವಾಸ್ತವಿಕತೆಯಲ್ಲಿ ಈ ಸತ್ಯವನ್ನು ನಿಜವಾಗಲೂ ನಂಬಿಕೊಂಡಿದ್ದರೆ ಜಾತಿ ರಾಡಿ ಎಬ್ಬಿಸಿದ ಅವರ ಕೃತಿ ಧಾರ್ಮಿಕ ಭಾವನೆಗಳಿಗೆ ಮಾಡಿದ ಆತ್ಮವಂಚನೆ, ಆತ್ಮಘಾತುಕತನವಾಗುತ್ತಿರಲಿಲ್ಲ.

ಇಂಥ ಪುಸ್ತಕ ಬರೆದು ಬಸವ ಜಯಂತಿಯ ಒಂದು ವಾರದ ಮೊದಲು ಪ್ರಕಟಿಸಿ ಒಂದಿಷ್ಟು ಸುದ್ದಿ ಮಾಡಿ ಅವರು ನಿರೀಕ್ಷೆ ಮಾಡಿದ "ಕಲರವ" ವಾಗದಿದ್ದಾಗ ವಿಕೃತ ಪತ್ರಿಕಾ ಹೇಳಿಕೆಗಳನ್ನು ನೀಡುತ್ತ ಸಮಾಜದಲ್ಲಿ ಅಶಾಂತಿಯ ಪ್ರಚೋದನೆಗಳಿಗೆ ಬಂಜಗೆರೆಯವರು ಮತ್ತು ಅವರ ಗುಂಪು ಪ್ರಯತ್ನಿಸುತ್ತಿರುವುದು ಒಂದು ಸಾಹಿತ್ಯದ ಮೂಲಕ ಅನಾರೋಗ್ಯ ಬೆಳವಣಿಗೆ. ಬಂಜಗೆರೆ ಹೇಳಿಕೊಂಡಂತೆ ಅವರಿಗಿರುವ ಚಿತ್ರದುರ್ಗದ ಮುರುಘಾಶರಣರ ಬೆಂಬಲ ಹಾಗೂ ಡಾ|| ಎಂ.ಎಂ.ಕಲಬುರ್ಗಿಯವರ ದೂರವಾಣಿ ಮೂಲಕ ಅಭಿನಂದನೆಗಳು ದೊರಕಿರಬಹುದು.

ಅಡುಗು ಕಚ್ಚಿದ ಶ್ವಾನ ಒಡೆಯನ ಕುರುಹು ಬಲ್ಲುದೇ...?
ಈಚಲ ತಿಂದ ನರಿ ತನ್ನ ವಿಕಾರಕ್ಕೆ ಒದರುವಂತೆ
ಮಾತಿನ ಮಮಕಾರಕ್ಕೆ ಆಗುವ ಬಲ್ಲೆವೆಂದು ಕೂಗಿಡುವರು....
ಹುಸಿಯನ್ನೇ ಪೂಜಿಸಿ ಗಸಣಿಗೊಳಗಾದ ಪಿಸುಣಿಗಳು...

ಈ ಬೆಂಬಲ ಮತ್ತು ಅಭಿನಂದನೆಗಳಿಗೆ ಪ್ರತಿಕ್ರಿಯಿಸಲು ನನ್ನಲ್ಲಿ ಶಬ್ದಗಳಿಲ್ಲ. ಇನ್ನೊಂದು ಆಶ್ಚರ್ಯಕರ ಸಂಗತಿಯೆಂದರೆ ನಮ್ಮ ರಾಜ್ಯದ ಗೃಹ ಸಚಿವರು 27.05.07ರಂದು ತಮ್ಮ ತವರು ಜಿಲ್ಲೆ ಬಳ್ಳಾರಿಯಲ್ಲಿ ಮಾದಿಗರ ಸ್ವಾಭಿಮಾನ ಸಮಾವೇಶದಲ್ಲಿ ಜಗತ್ತಿನ ಎಲ್ಲ ವೀರಶೈವ ಲಿಂಗಾಯತರಿಗೆ ಒಂದು ಫತ್ವಾ ಹೊರಡಿಸಿದ್ದಾರೆ. ಬಂಜಗೆರೆಯ ಈ ಕೃತಿಯನ್ನು ಎಲ್ಲರೂ ಓದಬೇಕೆಂದೂ, ಲೇಖಕರು ಬಸವಣ್ಣನವರ ಹುಟ್ಟಿನ ಬಗ್ಗೆ ಇರುವ ಸಂಭವನೀಯತೆಯನ್ನು ಮಾತ್ರ ವ್ಯಕ್ತಪಡಿಸಿರುವರೇ ಹೊರತು ಇನ್ನೊಬ್ಬರ ಮನಸ್ಸನ್ನು ನೋಯಿಸುವ ಅಥವಾ ಧಾರ್ಮಿಕ ಭಾವನೆಯನ್ನು ಕೆರಳಿಸಿರುವ ಪ್ರಯತ್ನವನ್ನೇನೂ ಮಾಡಿಲ್ಲ ಎಂದು ಲೇಖಕರ ಪರವಾಗಿ ನ್ಯಾಯವನ್ನೂ ಕೊಟ್ಟೇಬಿಟ್ಟಿದ್ದಾರೆ! ಅವರ ದೃಷ್ಟಿಯಲ್ಲಿ ಸಂಭವನೀಯತೆಗಳೂ ಸಮಾಜ ಒಪ್ಪಿಕೊಳ್ಳಲೇಬೇಕಾದ ಸಂಶೋಧನೆಗಳು. ಎಂ.ಪಿ.ಪ್ರಕಾಶರು ಒಬ್ಬ ಪ್ರಬುದ್ಧ ಮತ್ತು ವಿಚಾರವಂತ ರಾಜಕಾರಣಿ ಎಂದುಕೊಂಡಿದ್ದ ನನ್ನ ಗ್ರಹಿಕೆ ತಪ್ಪಾಯಿತು.

ಒಂದು ಜವಾಬ್ದಾರಿ ಸ್ಥಾನದಲ್ಲಿರುವವರು ಬೆಂಕಿ ಹೊತ್ತಿಕೊಳ್ಳುತ್ತಿರುವ ಸಂದರ್ಭದಲ್ಲಿ ಸಂಜೆ ಪತ್ರಿಕೆ ಮಾರುವ ಹುಡುಗರ ತರಹ ಕೊಳ್ಳಿರಿ, ಓದಿರಿ - ಎಂದು ಕೂಗುವುದಕ್ಕಿಂತ ಹಿಂಸೆ ಮತ್ತು ದಬ್ಬಾಳಿಕೆಗಳ ಹಿನ್ನೆಲೆಯ ಒಬ್ಬ ಲೇಖಕನ ಕುಚೋದ್ಯದ ಪುಸ್ತಕವನ್ನು ಸಾರ್ವಜನಿಕವಾಗಿ ಬೆಂಬಲಿಸುವ ಮುನ್ನ, ತಾವು ಈ ರಾಜ್ಯದ ಶಾಂತಿ ಕಾಪಾಡುವ ಗೃಹ ಮಂತ್ರಿಗಳು ಎಂಬುದನ್ನು ಮರೆಯಬಾರದಾಗಿತ್ತು. ಬಹುಶಃ ಅವರು ರಾಜಕೀಯ ನಿವೃತ್ತಿ ಘೋಷಿಸಿಕೊಂಡಿರುವುದರಿಂದ ಅಥವಾ ತಮ್ಮ ಕ್ಷೇತ್ರ ಮೀಸಲು ಕ್ಷೇತ್ರ -ವಾಗುತ್ತಿರುವುದರಿಂದ ಅಥವಾ ಬಸವಾಭಿಮಾನಿಗಳ ಬೆಂಬಲದಿಂದ ರಾಜಕೀಯ ಎಲ್ಲಾ ಅಧಿಕಾರ, ಅಂತಸ್ತು ಅನುಭವಿಸಿ ಏಣಿ ಏರಿದ ಮೇಲೆ

ಏಣಿಯನ್ನು ಝಾಡಿಸಿ ಒದೆಯುವಂತೆ ಇದ್ದರೂ ಇದ್ದಿರಬಹುದು. ಆದರೆ ಒಂದು ಎಚ್ಚರಿಕೆ; ಮಹಾನುಭಾವರ ಸಾಧನೆಗಳ ಸಂಶೋಧನೆಗಿಂತ ಅವರ ಪಿತೃತ್ವ ಮೂಲವನ್ನೇ ಶಂಕಿಸಿ, ಕಿಡಿಗೇಡಿಗಳು ಹೇಳಿದರೆಂದು ಪುಸ್ತಕವನ್ನೇ ಬರೆದು ಮಾರುವ ದಂಧೆಯಲ್ಲಿರುವ ಬಂಜಗೆರೆ, ಗೃಹಮಂತ್ರಿಗಳ ಬೆಂಬಲದಿಂದ ಉನ್ಮಾದಗೊಂಡು ತನ್ನನ್ನು ಬೆಂಬಲಿಸಿದವರ ಮೂಲವನ್ನೇ ಶಂಕಿಸಲೂ ಬಹುದು.

ಒಂದು ಸೂಕ್ಷ್ಮ ಬೆಳವಣಿಗೆಯನ್ನು ಈ ಪುಸ್ತಕ ಉದ್ಘಾಟನೆಯಿಂದ ಇಲ್ಲಿಯವರೆಗೆ ಗಮನಿಸಿದ್ದೇನೆ. ಒಂದು ವ್ಯವಸ್ಥಿತ ಗುಂಪು ಬೆಂಗಳೂರು ವಿಶ್ವವಿದ್ಯಾಲಯದ ಅಂಬೇಡಕರ್ ಅಧ್ಯಯನ ಕೇಂದ್ರ, ಕನ್ನಡ ಅಧ್ಯಯನ ಕೇಂದ್ರ, ಮೈಸೂರಿನ ಕೆಲ ಸಾಂಸ್ಕೃತಿಕ ಸಂಘಟನೆಗಳ ಮೂಲಕ ಈ ವಿಷಯದ ಕುರಿತು ಚರ್ಚೆ- ಸಂವಾದಗಳನ್ನು ಏರ್ಪಡಿಸಿ ಉರಿಯುವ ಬೆಂಕಿಗೆ ತುಪ್ಪ ಹಾಕುವ ಕೆಲಸ ಮಾಡುತ್ತಿರುವುದು ಸ್ಪಷ್ಟವಾಗಿ ಗೋಚರವಾಗ ತೊಡಗಿದೆ.

ಬಂಜಗೆರೆ ಮತ್ತು ಅವರ ಗೆಳೆಯರ ಗುಂಪು ತಮ್ಮ ಹೊಣೆಗಾರಿಕೆಯನ್ನು ಅರಿಯದೆ ಮುಂದುವರಿದಿದ್ದೇ ಆದರೆ ಹೇಗೆ ಬಸವಿ ಎನ್ನುವ ಶಬ್ದದ ಮೇಲೆ ಬಸವ ಎನ್ನುವ ಶಬ್ದವನ್ನು ವಿರೂಪಗೊಳಿಸಿದ ಬಂಜಗೆರೆ ಹೆಸರಿನಲ್ಲಿಯೇ ಇರುವ ಬಂಜ ಎನ್ನುವ ಶಬ್ದದ ಮೇಲೆ ಬಂಜಗೆರೆಯ ಇತಿಹಾಸವನ್ನು ಹಿಂಜುವ ಮತ್ತೊಬ್ಬ ತಲೆಹಿಡುಕ ಹುಟ್ಟುವ ಸಾಂಕೇತಿಕ ಎಚ್ಚರಿಕೆಯನ್ನು ಸದ್ಯದ ಬೆಳವಣಿಗೆ ನೀಡುತ್ತಿದೆ. ಧೂಳು ತಿನ್ನುತ್ತಿರುವ ಪಾದರಕ್ಷೆಗಳು, ಖಡ್ಗಗಳು ಮತ್ತು ತಲವಾರುಗಳು ಧೂಳಿನ ಜೊತೆಗೆ ಉಪಯೋಗವಾಗುವ ಕಾಲ ಸದ್ಯದ ದಿನಗಳಲ್ಲಿ ಬಹುದೂರವಿಲ್ಲ.

(ವಿಜಯ ಕರ್ನಾಟಕದ ಕೃಪೆಯಿಂದ)- ಶ್ರೀಕಂಠ.ಜಿ.ಚೌಕೀಮಠ

ಸಾಹಿತಿಗಳ ಅವಾಂತರ

- ಡಾ|| ಶಿ.ಬಾ.ಪಾಟೀಲ್

ಗುರು ಬಸವಣ್ಣನವರ ಹುಟ್ಟಿನ ಬಗ್ಗೆ ಬರೆದಿರುವ ಡಾ|| ಬಂಜಗೆರೆ ಜಯಪ್ರಕಾಶ್ ಎಂಬವರು ದಿಢೀರನೇ ಮಿಂಚಿದರು. ಮಹಾತ್ಮರಿಗೆ ಮಹಾಪುರುಷರಿಗೆ ಅಪಚಾರ ಮಾಡಿದವರು ಬೇಗನೇ ಪ್ರಸಿದ್ಧಿಯಾಗುತ್ತಾರೆ ಎನ್ನುವುದಕ್ಕೆ ಬಂಜಗೆರೆಯವರು ಸಾಕ್ಷಿ. ಕಲ್ಯಾಣದ ಕ್ರಾಂತಿಯಾದದ್ದು ಸ್ವಾತಂತ್ರ ಹೋರಾಟವಲ್ಲಾ, ಸಿಪಾಯಿಗಳ ಬಂಡಾಯಿಯಲ್ಲಾ, ಬೇಕೇಬೇಕು ನ್ಯಾಯಬೇಕು. ಎಂದು ಬೇಡಿಕೆ ಈಡೇರಿಕೆಗಾಗಿ ಮಾಡಿದ ಹೋರಾಟವಲ್ಲ. ದೌರ್ಜನ್ಯದ ವಿರುದ್ಧ ಪ್ರತಿಭಟನೆಯಂತೂ ಅಲ್ಲವೇ ಅಲ್ಲ. ಎಲ್ಲರೂ ಬದುಕಬೇಕು ನಾವೆಲ್ಲ ಸಮಾನರು ಎಂದು ಒಂದು ಗೂಡಿಸಲು ಪ್ರಯತ್ನಿಸಿದ್ದಕ್ಕಾಗಿ ಆದ ಕ್ರಾಂತಿ.

ಅನುತ್ಪಾದಿತ ವರ್ಗದವರಿಗಿಂತ ಉತ್ಪಾದಿತ ವರ್ಗ ಶ್ರೇಷ್ಠ ಎಂದು ಕಾಯಕಕ್ಕೆ ಪಟ್ಟಗಟ್ಟಿ ಉತ್ಪಾದಿತ ವರ್ಗದವರನ್ನು ಸಂಘಟಿಸಿ ಅವರ ಅನುಭವಗಳ ಭಟ್ಟಿ ಇಳಿಸಿ ರಚಿಸಿದ ಸಾಹಿತ್ಯವೇ ವಚನ ಸಾಹಿತ್ಯ. ಈ ವಚನ ಸಾಹಿತ್ಯವು ಅನುತ್ಪಾದಿತ ವರ್ಗದವರಿಗೆ ಉಸಿರು ಕಟ್ಟಿದಂತಾಯ್ತು. ಅಂತರ್ ಜಾತಿ ವಿವಾಹ ಮುಂದೆ ಮಾಡಿ ವಚನ ಸಾಹಿತ್ಯನಾಶಗೊಳಿಸುವುದೇ ಒಂದಂಶದ ಕಾರ್ಯಕ್ರಮವಾಗಿತ್ತು. ವಚನ ಸಾಹಿತ್ಯನಾಶ ಗೊಳಿಸುವ ಕಾರ್ಯ ಕಲ್ಯಾಣ ಕ್ರಾಂತಿಯ ನಂತರದಿಂದ ನಿರಂತರವಾಗಿ ಇಂದಿಗೂ ಸಾಗಿಬಂದಿದೆ. ಆಗಾಗ ವಚನ ಸಾಹಿತ್ಯವನ್ನು ಕರಡು ಪ್ರತಿ ಮಾಡುವಾಗ ತಮಗೆ ಅರ್ಥವಾಗದ ಪದಗಳನ್ನು ಬದಲಿಸುವುದು. ಶರಣರ ವಿಚಾರಧಾರೆಗೆ ಚ್ಯುತಿಯುಂಟಾಗುವಂಥ ಪದಗಳನ್ನು ಸೇರಿಸುವುದು ಇವುಗಳೆಲ್ಲ ಏಕಕಾಲಕ್ಕೆ ನಡೆದು ಬಂದಿವೆ. ಮುಂದಿನವರು ಸೇರ್ಪಡೆಗೊಂಡ ಪದಗಳನ್ನು ಅಪಾರ್ಥವಾಗಿ ಅರ್ಥೈಸಿ ಅನಾಹುತವೆಸಗುತ್ತಿದ್ದಾರೆ. ಶರಣರ ಅಂತರಾತ್ಮದ ಮಿಡಿತವನ್ನು ಒಳಧ್ವನಿಯನ್ನು ತಿಳಿದುಕೊಳ್ಳದೇ ಹಾಗಿರಬಹುದು, ಹೀಗಿರಬಹುದು ಎಂಬ ಕುತರ್ಕದಿಂದ ಗೊಂದಲ ಸೃಷ್ಟಿಸುವುದರೊಂದಿಗೆ ಶರಣ ಧರ್ಮ, ಶರಣ ಚಾರಿತ್ರ್ಯಕ್ಕೆ ಅಪಚಾರ ಮಾಡುತ್ತಿದ್ದಾರೆ. ಇದಕ್ಕೆ ಉದಾ: ತಲೆದಂಡ, ಮಾರ್ಗ-2, ಮಹಾಚೈತ್ರ, ಅನುದೇವಾ ಹೊರಗಣವನು, ಮುಂತಾದವು. ಇವರಲ್ಲಿ ಎರಡು ಉದ್ದೇಶ. 1) ಶರಣ ಸಾಹಿತ್ಯದ ಗುಣಮಟ್ಟ ಕುಗ್ಗಿಸಿ ಶರಣರ ಬಗ್ಗೆ ಇರುವ

ಗೌರವಾದರ ಕಡಿಮೆ ಮಾಡುವುದು. 2) ತಾವು ಶರಣ ಸಾಹಿತ್ಯದಲ್ಲಿ ನ್ಯೂನತೆ ಕಂಡು ಹಿಡಿದು ಹೆಸರು ಗಳಿಸುವುದು. ಈಗ ಆದದ್ದೂ ಇದೆ.

ನೀಲಗಂಗಾಂಬಿಕೆಯವರ ಆಭರಣ ಕಳ್ಳನು ಅಪಹರಿಸಿದಾಗ ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಾನ ತೆಗೆದು ಕೊಡು ಚಂಡಾಲಗಿತ್ತಿ. ಎಂದು ಗುರು ಬಸವಣ್ಣನವರು ಹೇಳಿದ ಸಂದರ್ಭವನ್ನೇ ಬಸವಣ್ಣನವರು ಕಳ್ಳರು ಎಂದು ಕೊಂಡಿದ್ದಾರೆ. ಇಂಥ ಕಳುವಿನ ಹಣದಿಂದ ದಾಸೋಹ ಮಾಡಿಸುತ್ತಿರಬಹುದೆಂದೂ, ಚಂಡಾಲಗಿತ್ತಿ ಎಂದು ಅಂದದ್ದಕ್ಕಾಗಿ ಶರಣರ ಕಾಲದಲ್ಲಿ ಸ್ತ್ರೀಶೋಷಣೆಯಿತ್ತು ಎಂಬ ವಿಷಯದ ಮೇಲೆ ಒಂದು ಮಹಾವಿದ್ಯಾಲಯದಲ್ಲಿ ಉಪನ್ಯಾಸವಿತ್ತು. ಇದು ಡಾ|| ಕಲಬುರ್ಗಿಯವರ ನೇತೃತ್ವದಲ್ಲಿ ಅವರು ಉಪನ್ಯಾಸಕರ ವಿಚಾರಕ್ಕೆ ತಮ್ಮ ಸ್ಪಷ್ಟ ಅಭಿಪ್ರಾಯ ಹೇಳದೇ ತ್ಯಾಪೆಹಚ್ಚುವ ಕೆಲಸ ಮಾಡಿದ್ದರಂತೆ.

ಚನ್ನಯ್ಯನಿಗೆ ಅಪ್ಪ, ಕಕ್ಕಯ್ಯಗೆ ಬೊಪ್ಪ, ಬೊಮ್ಮಯ್ಯನಿಗೆ ಅಣ್ಣ ಇಂತಹವರ ಆಳು ಮಕ್ಕಳು ಬೆರಣಿಗೆ ಹೋದಾಗ ಅವರ ಅಕ್ರಮ ಸಂಬಂಧದಿಂದ ಜನಿಸಿದವನಾದರೆಂದು ಹೇಳಿದರೆ ವಚನ ಶಾಸ್ತ್ರವೆಂದರೇನು? ಸಿರಿಂಜಿನಲ್ಲಿ ರಕ್ತ ತಕ್ಕೊಂಡು ಶರೀರದಲ್ಲಿ ಸಕ್ಕರೆ ಕಂಡು ಹಿಡಿದಂತೆಯೇ? ಕುದಿಯುವ ಅನ್ನದಲ್ಲಿ ಒಂದಗಳ ತಕ್ಕೊಂಡು ಕುದ್ದಿರುವುದನ್ನು ಕಂಡು ಹಿಡಿಯಲು ಅದೇನು ಅಕ್ಕಿ ಕಾಳೇ? ಸಮಾಜವು ಕೆಳವರ್ಗದವರೆಂದು ಗುರುತಿಸಿದವರಲ್ಲಿ ಆತ್ಮ ವಿಶ್ವಾಸ ಮೂಡಿಸಿ ಅವರೂ ಮನುಷ್ಯರು ಎಂಬ ಆತ್ಮೀಯ ಧ್ವನಿ ವಚನಗಳಲ್ಲಿದೆ. ಅದರೊಂದಿಗೆ ಮಾನವೀಯ ಧರ್ಮವೂ ಇದೆ.

ಅಲ್ಪಮತಿಯ ಪ್ರದರ್ಶನ ಮಾಡಿ ಬರೆದ ಸಾಹಿತ್ಯಕ್ಕೆ ಸರಕಾರ ಮುಟ್ಟುಗೋಲು ಹಾಕಬೇಕೆಂದು ಹೋರಾಟ ಮಾಡಿದರೆ ಹೋರಾಟಕ್ಕೆ ಕಾರಣ ಕಳಕಳಿ ವಿಚಾರಿಸದೇ ಲೇಖಕರಿಗೆ ಅಭಯ ನೀಡಿವರು ರಾಜ್ಯದ ಗೃಹ ಮಂತ್ರಿಗಳು ಅವರ ಜಾತಿಯವರೇ ಆದ ಮಾರವಾಡಿಗಳು! ಜಾಣ ಕುರುಡರಂತೆ ವರ್ತಿಸುತ್ತಾರೆ ಯಾಕೆಂದರೆ ಇವರೆಲ್ಲ ಸರಕಾರದ ಅನುದಾನದ ಸಂಘ ಸಂಸ್ಥೆಗಳನ್ನು ಹೊಂದಿ ಸರಕಾರದ ಋಣದಲ್ಲಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ ಇವರೆಲ್ಲರೂ ಹನ್ನೆರಡನೆಯ ಶತಮಾನದಲ್ಲಿಯೂ ಶರಣ ಸಾಹಿತ್ಯ ನಾಶ ಮಾಡಿ ಖುಷಿ ಪಟ್ಟಂವರ ವಂಶಕರೆಂಬಂತೆ ಭಾಸವಾಗುತ್ತದೆ.

ಗೃಹ ಮಂತ್ರಿಗಳ ಪರವಾಗಿಯೇ ಹೇಳಿಕೆಯನ್ನು ನೀಡಲು ಸಾಹಿತಿ ಎಂಬ ಹಣೆಪಟ್ಟಿಯವರು ಮಾಡುವ ಚರ್ಚೆಯಲ್ಲಿ ''ಇದು ಚರ್ಚೆ ಅಲ್ಲ, ಬೂಟಾಟಿಕೆ'' ಎಂದು ಶ್ರೀ ದಯಾನಂದ ಸ್ವಾಮಿಗಳವರು ಪ್ರತಿಭಟಿಸಿ ದಿಟ್ಟ ನಿಲುವಿನಿಂದ ಹೋರಾಡಿದಕ್ಕೆ ಅವರಿಗೆ ಅಭಿನಂದನೆಗಳು. (ಟಿ.ವಿ ಸುದ್ದಿಯಲ್ಲಿ ಕಂಡಿರುವೆ.)

ಒಂದು ಧರ್ಮದ ಧರ್ಮಗುರುವಿಗೆ ನಿಂದನೆ ಮಾಡಿದ ಒಂದು ಪತ್ರಿಕೆಯ ಕಾರ್ಯವನ್ನೇ ಧ್ವಂಸ ಮಾಡಿ ಅದೇ ಪತ್ರಿಕೆಯವರಿಂದ ಕ್ಷಮೆ ಕೇಳೀಸಿದವರ ಒಗ್ಗಟ್ಟೆಲ್ಲಿ? ಶರಣರ ಸಾಹಿತ್ಯದ ಮೇಲೆ ಅದೂ ಧರ್ಮಗುರುವಿನ ಚರಿತ್ರೆಯ ಮೇಲೆ ಅವಮಾನಕಾರಿ ಹೇಳಿಕೆಯನ್ನು ನೀಡಿ ಚೆಲ್ಲಾಟ ಮಾಡಿದರೂ ಅಂಥವರಿಗೆ ಸರಕಾರದ ಬೆಂಬಲ ಸಾಹಿತಿಗಳ ಬೆಂಬಲ ನೀಡುವಲ್ಲಿ ಇವರಿಗೆಲ್ಲ ಏನೆನ್ನಬೇಕೆಂದು ನನ್ನ ತಲೆಗೆ ತೋಚದಾಗಿದೆ. ಯಾಕೆಂದರೆ ಏನೆಂದು ಕರೆದರೂ ಅವರ ಯೋಗ್ಯತೆಗೆ ನನ್ನ ಬೈಗುಳ ಕಡಿಮೆಯಾಗುತ್ತದೆಯೇನೋ?!

★ ★ ★ ★ ★ ★ ★ ★ ★ ★ ★ ★ ★

ಮಾತಾಜಿಯಿಂದಾಯಿತ್ತು ಬಸವ ಧರ್ಮ ; ಮಾತಾಜಿಯಿಂದಾಯಿತ್ತು ವಚನ ಶುದ್ಧೀಕರಣ ;
ಮಾತಾಜಿಯಿಂದಾಯಿತ್ತು ಲಿಂಗಾಯತ ಧರ್ಮ ಸಂಘಟನೆ;
ಮಾತಾಜಿಯಿಂದಾಯಿತ್ತು ಶರಣ ಧರ್ಮದ ಪುನರುಜ್ಜೀವನ ; ಮಾತಾಜಿಯಿಂದಾಯಿತ್ತು ಜನ ಜಾಗೃತಿ
ಇಂತೀ ಹಲವು ಪ್ರಗತಿಪರ ವಿಚಾರಂಗಳು ಮಾತಾಜಿಯಿಂದಲೇ ಆದವು
ಲೀಲಾ ವಿಶೇಷ ಲಿಂಗದೇವ.

- ಮಾತೆ ಜ್ಞಾನೇಶ್ವರಿ

ಅನು ದೇವಾ ಹೊರಗಣವನು ಪುಸ್ತಕ ನಿಷೇಧಕ್ಕಾಗಿ ಜುಲೈ 25ರಂದು ಬೃಹತ್ ರ್‍ಯಾಲಿ, ಭಾಗವಹಿಸಲು ಕರೆ

ಶರಣ ಬಂಧುಗಳೇ, ಅನು ದೇವಾ ಹೊರಗಣವನು ಪುಸ್ತಕ ನಿಷೇಧಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿದೆವು. ಅಷ್ಟರಲ್ಲಿ ಕಲ್ಯಾಣ ಪರ್ವ ಬಂದಿತು. ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬರದೆ ಇದ್ದುದರಿಂದ ಮಾತ್ರವಲ್ಲ ಗೃಹ ಸಚಿವರಾದ ಶ್ರೀ ಎಂ.ಪಿ.ಪ್ರಕಾಶರು ಪುಸ್ತಕವನ್ನು ಪ್ರೋತ್ಸಾಹಿಸಿ ಮಾತನಾಡಿದ್ದರಿಂದ ಎಲ್ಲರಿಗೂ ಅಪಾರ ನೋವಾಯಿತಲ್ಲದೆ ಆಕ್ರೋಶ ಸಹ ಉಂಟಾಯಿತು. ಜೂನ್ 18ರಂದು ಗುರು ಬಸವಣ್ಣನವರ ಪುತ್ಥಳಿಯ ಮುಂದೆ ನಾವು ಧರಣಿ ಸತ್ಯಾಗ್ರಹ ಮಾಡಿ, ಉಪ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದೆವು. ವೀರಶೈವ ಮಹಾಸಭೆಯವರು ಜುಲೈ 5ಕ್ಕೆ ಬೃಹತ್ ರ್‍ಯಾಲಿ ಹಮ್ಮಿಕೊಂಡುದಾಗಿ ತಿಳಿಸಿ ರಾಷ್ಟ್ರೀಯ ಬಸವ ದಳಗಳ ಸಹಕಾರ ಕೋರಿದರು. ಸಂತೋಷದಿಂದ ಸಿದ್ಧರಾದೆವು. ಬಾಗಲಕೋಟೆ, ಗಂಗಾವತಿ, ಬೀದರ್, ಗುಲಬರ್ಗಾಗಳಲ್ಲಿ ಪತ್ರಿಕಾ ಗೋಷ್ಠಿಯನ್ನು ಕರೆದು ಜುಲೈ 5ಕ್ಕೆ ಪ್ರತಿಭಟನೆ ಇರುವುದಾಗಿ ತಿಳಿಸಲಾಯಿತು. ಆದರೆ ವೀರಶೈವ ಮಹಾಸಭೆಯವರು ಇದ್ದಕ್ಕಿದ್ದಂತೆಯೇ ಜುಲೈ 25ಕ್ಕೆ ಮುಂದಕ್ಕೆ ಹಾಕಿದರು. ನಾವು ರಾಷ್ಟ್ರೀಯ ಬಸವ ದಳದ ವತಿಯಿಂದ ಪ್ರತಿಭಟನಾ ರ್‍ಯಾಲಿ ಏರ್ಪಡಿಸಿದೆವು ಎಲ್ಲ ರಾಷ್ಟ್ರೀಯ ಬಸವ ದಳಗಳಿಗೆ ತಿಳಿಸಲು ಸಮಯದ ಅಭಾವವಿತ್ತು ಕೆಲವು ರಾಷ್ಟ್ರೀಯ ಬಸವ ದಳಗಳಿಗೆ ಅದೂ ದೂರವಾಣಿಯ ಮೂಲಕ ಮಾತ್ರ ತಿಳಿಸಲು ನಮಗೆ ಸಾಧ್ಯವಾಯಿತು. ಆದರೂ ಸಹ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದಲ್ಲದೆ, ಬಹಳ ಶಿಸ್ತಿನಿಂದ ವರ್ತಿಸಿದ್ದು ಬಹಳ ಜನರ ಮೆಚ್ಚುಗೆಗೆ ಪಾತ್ರವಾಯಿತು. ಸ್ವತಃ ಮುಖ್ಯ ಮಂತ್ರಿಗಳೇ ರಾಷ್ಟ್ರೀಯ ಬಸವ ದಳದವರ ಸಂಯಮ, ಶಿಸ್ತು ಕುರಿತು ಮೆಚ್ಚುಗೆ ವ್ಯಕ್ತ ಪಡಿಸಿದರು. ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷರಾದ ಶ್ರೀ ಭೀಮಣ್ಣ ಖಂಡ್ರೆಯವರು ಸಹ ಪ್ರತಿಭಟನಾ ಸ್ಥಳಕ್ಕೆ ಬಂದು ಮುಕ್ತ ಕಂಠದಿಂದ ರಾಷ್ಟ್ರೀಯ ಬಸವ ದಳದವರ ಬಸವ ನಿಷ್ಠೆ ಮತ್ತು ಶಿಸ್ತನ್ನು ಪ್ರಶಂಸಿಸಿದರು. ನಿಜಕ್ಕೂ ದಿ.5-7-2007ರಂದು ಅಲ್ಪ ಸಮಯದಲ್ಲೇ ಸಮಾವೇಶವಾದ ಪ್ರತಿಭಟನಾ ಪ್ರದ ರ್ಶನ ಯಶಸ್ವಿಯಾಯಿತಲ್ಲದೆ ಬಹಳ ವ್ಯಾಪಕವಾಗಿ ಪ್ರಚಾರಗೊಂಡು ಜನರಿಂದ, ಮಾಧ್ಯಮಗಳಿಂದ ಮೆಚ್ಚುಗೆಯನ್ನು ಪಡೆಯಿತು. ಅದಕ್ಕಾಗಿ ನಾನು ಭಾಗವಹಿಸಿದ ಎಲ್ಲರನ್ನು ಅಭಿನಂದಿಸುತ್ತೇನೆ.

ಮುಖ್ಯ ಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು ಬಂದು ಮನವಿ ಸ್ವೀಕರಿಸುವವರೆಗೂ ನಾವಿಲ್ಲಿಂದ ಕದಲುವುದಿಲ್ಲ ಎಂದು ಅವರ ಮನೆಗೆ ಸ್ವಲ್ಪವೇ ದೂರದಲ್ಲಿ ವಾಹನ ಸಂಚಾರ ನಿಲ್ಲಿಸಿ ಧರಣಿ ಕೂರಲಾಯಿತು. ಏಕೆಂದರೆ 144 ಕಲಂ ಜಾರಿಯಲ್ಲಿಟ್ಟು ಮನೆಯವರೆಗೆ ಯಾರನ್ನೂ ಪೋಲೀಸರು ಬಿಡುವುದಿಲ್ಲ. ಶ್ರೀ ದಯಾನಂದ ಸ್ವಾಮಿಗಳ ನೇತೃತ್ವದಲ್ಲಿ 5-6 ಜನರು ಮುಖ್ಯ ಮಂತ್ರಿಗಳ ಬಳಿಗೆ ಹೋಗಿ ಜನರು ಎಲ್ಲೆಡೆಯಿಂದ ಬಂದಿದ್ದು ಕಾಯುತ್ತಿದ್ದಾರೆ ಎಂಬುದನ್ನು ಮನವರಿಕೆ ಮಾಡಿಕೊಡಲಾಯಿತು. ಸ್ವತಃ ಮುಖ್ಯ ಮಂತ್ರಿಗಳೇ ಬಂದು ಜನರನ್ನು ಉದ್ದೇಶಿಸಿ ಮಾತನಾಡಿದರು. "ಪುಸ್ತಕದ ಕೆಲವು ವಾಕ್ಯಗಳನ್ನು ಓದಿ ನನಗೂ ಬಹಳಷ್ಟು ನೋವಾಗಿದೆ. ಎರಡು ಮೂರು ದಿವಸಗಳಲ್ಲಿಯೇ ಕಾನೂನು ಕ್ರಮವನ್ನು ಕೈಗೊಳ್ಳಲಾಗುವುದು. ನೀವು ಬಸವ ಸಂಸ್ಕೃತಿಗೆ ಬದ್ಧರಾಗಿ ಶಾಂತವಾಗಿ ಪ್ರತಿಭಟನೆ ಮಾಡಿದ್ದು ನನಗೆ ಸಂತೋಷ ತಂದಿದೆ." ಎಂದರು. ಮುಖ್ಯ ಮಂತ್ರಿಗಳು ಆಶ್ವಾಸನೆ ನೀಡಿ ಹೋದ ನಂತರ ಭಾಗವಹಿಸಿದ ಎಲ್ಲರನೂ ಅಭಿನಂದಿಸಿ, ಮಂಗಲ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದೆವು.

10-7-200ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಸರ್ಕಾರವು ಒಂದು ಸತ್ಯ ಶೋಧನ ಸಮಿತಿಯನ್ನು ಡಾ॥ಗೀತಾ ನಾಗಭೂಷಣ್ ಅವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದು ಈ ಸಮಿತಿಯಲ್ಲಿ ಶ್ರೀಯುತರಾದ ಬರಗೂರು ರಾಮಚಂದ್ರಪ್ಪ, ಚಂಪಾ, ಡಾ॥ ಎಂ.ಎಂ.ಕಲಬುರ್ಗಿ, ಡಾ॥ ಮ.ನ ಜವರಯ್ಯ ಇರುವುದಾಗಿ ತಿಳಿಸಲಾಗಿದೆ. ಇದರಲ್ಲಿ ಹೆಚ್ಚಿನವರು ನಾಸ್ತಿಕವಾದವರು; ದೇವರು, ಧರ್ಮ ಮುಂತಾದ

ದಾರ್ಶನಿಕ ಮೌಲ್ಯಗಳಲ್ಲಿ ನಂಬಿಕೆ ಇಲ್ಲದವರು, ಭಾವಶೂನ್ಯರು. ಇವರೇ ಅಧಿಕ ಸಂಖ್ಯೆಯಲ್ಲಿರುವ ಸಮಿತಿಯು ಅನು ದೇವಾ ಹೊರಗಣವನು ಪುಸ್ತಕದ ಲೋಪದೋಷಗಳನ್ನು ವಿಮರ್ಶಿಸುತ್ತದೆ ಎಂಬ ನಂಬಿಕೆ ನಮಗಾರಿಗೂ ಇಲ್ಲ.

ಸರ್ಕಾರವು ಪುಸ್ತಕವನ್ನು ನಿಷೇಧಿಸಲು ಯಾರ ಅಭಿಪ್ರಾಯ ಮತ್ತು ಅನುಮತಿಗಾಗಿ ಕಾಯಬೇಕಾಗಿಲ್ಲ. ಏಕೆಂದರೆ ಅದಕ್ಕೆ ಧರ್ಮಕಾರಣ ಪುಸ್ತಕ ಕುರಿತು ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಆಧಾರವಿದೆ. ಹಿಂದೆ ಡಾ॥ ಪಿ.ವಿ.ನಾರಾಯಣ ಕೆಲವೊಂದು ಅಸಂಗತ ವಿಚಾರಗಳನ್ನು ಧರ್ಮಕಾರಣದಲ್ಲಿ ಬರೆದಾಗ ಜನರು ಆಕ್ಷೇಪ ವ್ಯಕ್ತಪಡಿಸಿದರು. ಆಗ ಕರ್ನಾಟಕ ಸರ್ಕಾರ ಆ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡಿತು. ಇದನ್ನು ಪ್ರಶ್ನಿಸಿ ಡಾ॥ ಪಿ.ವಿ.ನಾರಾಯಣ್ ಮತ್ತು ಇತರ ಕೆಲವು ಸಾಹಿತಿಗಳು ಸರ್ವೋನ್ನತ ನ್ಯಾಯಾಲಯದವರೆಗೆ ಹೋದರು. ಅಂತಿಮವಾಗಿ ಅದು ಹೀಗೆ ಅಭಿಪ್ರಾಯಪಟ್ಟು ತೀರ್ಪು ನೀಡಿದೆ. ಯಾರದೇ ಧಾರ್ಮಿಕ ನಂಬಿಕೆ ಹಾಗೂ ಭಾವನೆಗಳಿಗೆ ಚ್ಯುತಿ ಬರುವಂತೆ ಕೃತಿಗಳನ್ನು ರಚಿಸಬಾರದಿದೆ. ಪಿ.ವಿ.ನಾರಾಯಣರ ಧರ್ಮಕಾರಣದಲ್ಲಿ ಬೆರಳೆಣಿಕೆಯಷ್ಟು ಪ್ರಮಾದಾತ್ಮಕ ಅಂಶಗಳಿದ್ದರೆ ಬಂಜಗೆರೆ ಪುಸ್ತಕದಲ್ಲಿ ಇಡೀ ಕೃತಿಯ ತುಂಬ ದೋಷಗಳು, ಕುಹಕ ಕಲ್ಪನೆಗಳು ಇವೆ. ಜಾತಿ ಮತ ಪಂಥ ಭೇಧವಿಲ್ಲದೆ ಬಸವಾಭಿಮಾನಿಗಳು ಪ್ರಸ್ತುತ ಪುಸ್ತಕವನ್ನು ಖಂಡಿಸಿದ್ದಾರೆ, ನಾಡಿನ ಎಲ್ಲೆಡೆ ತೀವ್ರ ಪ್ರತಿಭಟನೆಗಳೂ ವ್ಯಕ್ತವಾಗಿವೆ. ಇಷ್ಟು ವ್ಯಾಪಕ ಮತ್ತು ತೀವ್ರ ಪ್ರತಿಭಟನೆ ಯಾವ ಸಾಹಿತ್ಯ ಕೃತಿಗೂ ಆಗಿರಲಿಲ್ಲ. ಇದೆಲ್ಲವೂ ನಿಚ್ಚಳವಾಗಿದ್ದಾಗ ಒಂದು ಸಮಿತಿಯನ್ನು ಮಾಡಿ ಅದರಲ್ಲಿ ಬಂಜಗೆರೆ ಮತ್ತು ಅವರ ಕೃತಿ ಎರಡನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಸೋಗಿನಲ್ಲಿ ಸಮರ್ಥಿಸಿಕೊಳ್ಳುವ ಸಾಹಿತಿಗಳನ್ನೇ ಸಮಿತಿಯ ಸದಸ್ಯರನ್ನಾಗಿ ತೆಗೆದುಕೊಂಡಿರುವ ಸರ್ಕಾರದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಮ ಬಹಳ ಹಾಸ್ಯಾಸ್ಪದ ಎನಿಸುತ್ತದೆ.(ಅ)ಸತ್ಯ ಶೋಧನ ಸಮಿತಿಯ ಅಭಿಪ್ರಾಯ ಏನೇ ಇರಲಿ ಬಂಜಗೆರೆಯ ಪುಸ್ತಕದ ಮುಟ್ಟುಗೋಲು ಅರ್ಥಾತ್ ನಿಷೇಧ ಒಂದೇ ಹೋರಾಟಗಾರರ ಬೇಡಿಕೆ.

ಜುಲೈ 25ರ ಬೆಂಗಳೂರು ಚಲೋ - ಬೃಹತ್ ಪ್ರತಿಭಟನೆ

ಸಮಿತಿಯ ಅಭಿಪ್ರಾಯ ನೀಡಲು ದಿ 17 ಅನ್ನು ಗಡುವಾಗಿ ನೀಡಲಾಗಿದೆ. ಒಂದು ವೇಳೆ ಸರ್ಕಾರ 17ರ ನಂತರ ಬೇಗನೆ ಪುಸ್ತಕ ಕುರಿತು ನಿಷೇಧಾಜ್ಞೆ ಹೊರಡಿಸಿದರೆ ಆಗ ಜುಲೈ 25ರ ಬೆಂಗಳೂರು ಚಲೋ ಕಾರ್ಯಕ್ರಮವನ್ನು ಕೈ ಬಿಟ್ಟು, ಸ್ಥಳೀಯವಾಗಿಯೇ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಪುನಃ ಮತ್ತೊಂದು ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ಜುಲೈ 25ರಂದು ಮಾಡುವುದು ಅನಿವಾರ್ಯವಾಗುತ್ತದೆ. ಆದ್ದರಿಂದ ಈಗಿನಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜುಲೈ 25ಕ್ಕೆ ಬರಲು ಸಿದ್ಧತೆ ಮಾಡಿಕೊಳ್ಳಬೇಕು. ಏಕೆಂದರೆ ಪುಸ್ತಕವನ್ನು ಮುಟ್ಟುಗೋಲು ಹಾಕದಿದ್ದರೆ ಹೋರಾಟವನ್ನು ಮುಂದುವರಿಸಬೇಕು ಮತ್ತು ತೀವ್ರಗೊಳಿಸಲೇಬೇಕು. ದಿ.5-7-2007ರಂದು ನಡೆದ ಪ್ರತಿಭಟನಾ ಪ್ರದರ್ಶನವು ಮುಖ್ಯವಾಗಿ ರಾಷ್ಟ್ರೀಯ ಬಸವ ದಳ ಸಂಘಟಿಸಿದ್ದಾಗಿತ್ತು. ಈಗ ಜುಲೈ 25ರಂದು ಸಂಯೋಜಿತವಾಗಿರುವ ಬೆಂಗಳೂರು ಚಲೋ ಪ್ರತಿಭಟನಾ ಕಾರ್ಯಕ್ರಮವು ಬಸವಾಭಿಮಾನಿಗಳ ಒಕ್ಕೂಟದಿಂದ ನಡೆಯಲಿದೆ. ಇದರಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ, ರಾಷ್ಟ್ರೀಯ ಬಸವ ದಳಗಳೇ ಅಲ್ಲದೆ, ವಿಶ್ವ ಬಸವ ಧರ್ಮ ಮಹಾಸಭಾ, ಬಸವ ಸಮಿತಿ, ಸಮುಂಗಲಿ ಸೇವಾಶ್ರಮ ಮುಂತಾದ ಹಲವಾರು ಸಂಘ-ಸಂಸ್ಥೆಗಳು ಒಟ್ಟುಗೂಡಿವೆ. ಆದ್ದರಿಂದ ಎಲ್ಲರೂ ಒಗ್ಗಟ್ಟಿನಿಂದ ಹೋರಾಡುವುದು ಅಗತ್ಯವಿದೆ.

ಈಗಿನಿಂದಲೇ ಜನರನ್ನು ಸಂಘಟಿಸಬೇಕು. ವಿವರಗಳು ಬೇಕಾದಲ್ಲಿ ಸಂಪರ್ಕಿಸುತ್ತಿರಬೇಕು. ಧರ್ಮಗುರುವಿನ ಮತ್ತು ವೀರ ಮಾತೆ ಅಕ್ಕನಾಗಲಾಂಬಿಕೆಯಂಥವರ ನಿಂದೆಯನ್ನು ಸಹಿಸಿಕೊಳ್ಳುವುದು ನಿಜಕ್ಕೂ ಒಂದು ಪಾಪ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಬೇಕು. ಮುಸ್ಲೀಮ್ ಬಂಧುಗಳು ಒಂದೇ ರೀತಿಯ ಟೋಪಿ, ಸಿಖ್ಖರು ಪೇಟಾ ಧರಿಸುವಂತೆ ಬಿಳಿಯ ಬಟ್ಟೆ ಮತ್ತು ಕಾವಿಯ ಬಸವ ರಕ್ಷೆ (ಸ್ಕಾರ್ಫ್) ಯನ್ನು ತಪ್ಪದೆ ಧರಿಸಿಕೊಳ್ಳಬೇಕು.

ರೇಲ್ವೆ ನಿಲ್ದಾಣದಲ್ಲಿ ಅತ್ಯಂತ ಕಡಿಮೆ ದರದಲ್ಲಿ ತಣ್ಣೀರಿನ ಸ್ನಾನಕ್ಕೆ 2 ರೂ, ಬಿಸಿ ನೀರಿನ ಸ್ನಾನಕ್ಕೆ 5ರೂದಂತೆ ಸ್ನಾನದ ಅವಕಾಶವಿರುತ್ತದೆ. ಆದರಿಂದ ರೇಲ್ವೆ ನಿಲ್ದಾಣದಲ್ಲಿಯೇ ಸ್ನಾನವನ್ನು ಮುಗಿಸಿ ಕೊಳ್ಳಬಹುದು. ವೀರಶೈವ ಮಹಾಸಭೆಯ ವಿವಿಧ ಘಟಕಗಳವರು ಆರ್ಥಿಕ ಅಶಕ್ತರಿಗಾಗಿ ಕೆಲವು ಊರುಗಳಿಂದ ಬಸ್ಸು / ಟೆಂಪೋ ಮುಂತಾದ ಸಾರಿಗೆ ವ್ಯವಸ್ಥೆಯನ್ನು ಮಾಡಲಿದ್ದಾರೆ. ಅಂಥ ಸೌಲಭ್ಯವನ್ನು ಆಸಕ್ತ ಬಸವಾಭಿಮಾನಿಗಳು ಬಳಸಿಕೊಳ್ಳಬೇಕು.

ಪ್ರತಿಭಟನಾ ಸಭೆ ಸಮಾವೇಶವಾಗುವ ಸ್ಥಳ, ಬೆಂಗಳೂರು ಅರಮನೆ ಮೈದಾನ, ದಿ.25-7-2007ರಂದು ಬೆಳಿಗ್ಗೆ 11-00ಗಂಟೆಗೆ. ವಿವಿಧ ಬೆಳವಣಿಗೆಗಾಗಿ ನಿರಂತರವಾಗಿ ನಮ್ಮ ಕಾರ್ಯಾಲಯದೊಡನೆ ಸಂಪರ್ಕದಲ್ಲಿರಬೇಕು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು, ಪ್ರಧಾನ ಕಾರ್ಯದರ್ಶಿ
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, 2ನೇ ಬ್ಲಾಕು,
ರಾಜಾಜಿ ನಗರ,ಬೆಂಗಳೂರು -560010
ದೂರವಾಣಿ: 080-23131476, 23325335,
ಜಂಗಮ ದೂರವಾಣಿ: 9449588669 / 9916795977

ಬಸವ ಮಂಟಪಕ್ಕೆ ಮೆಜಸ್ಟಿಕ್‌ನಿಂದ ಬಸ್ ಮಾರ್ಗ
251, 80 ಎ, 265, 80 ಈ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ

812ನೆಯ ಬಸವ ಲಿಂಗೈಕ್ಯ ಸಂಸ್ಮರಣೆ ನಿಮಿತ್ತ

2007ರ ಆಗಸ್ಟ್ 18 ಮತ್ತು 19ರಂದು ವಿಶೇಷ ಕಾರ್ಯಕ್ರಮ

ಶರಣ (ಶನಿ)ವಾರ. ದಿ 18-8-2007ರಂದು ಬಸವ ಪಂಚಮಿ
ದೇವ(ಭಾನು)ವಾರ. ದಿ19-8-2007ರಂದು ನೀಲಾಂಬಿಕಾ ಷಷ್ಠಿ

1. ಒಂದು ದಿವಸ ಗುರು ಬಸವಣ್ಣನವರ ಜೀವನ, ಸಾಧನೆ, ಸಂದೇಶ ಕುರಿತು ವಿಶೇಷ ಉಪನ್ಯಾಸಗಳು ಇರುತ್ತವೆ. ಶರಣ.ಡಿ.ಪಿ.ಪ್ರಕಾಶ್, ಶರಣ. ಡಾ|| ಸಿ.ಸೋಮಶೇಖರ್ ಐ.ಎ.ಎಸ್ ಮುಂತಾದವರು ಭಾಗವಹಿಸಲಿದ್ದಾರೆ.

2. ಇನ್ನೊಂದು ದಿವಸ ಇಷ್ಟಲಿಂಗ ಯೋಗ ವಿಜ್ಞಾನದ ಬಗ್ಗೆ ವಿಶೇಷ ಉಪನ್ಯಾಸ ಇರುತ್ತದೆ. ಇಷ್ಟಲಿಂಗದ ಸ್ವರೂಪ, ಅರ್ಥ, ಮಹತ್ವ, ಕಂಥೆಯ ಮಹತ್ವ ಅದರ ಹಿಂದಿನ ವೈಜ್ಞಾನಿಕತೆ, ತ್ರಾಟಕಯೋಗದ ಮಹತ್ವ ಮುಂತಾಗಿಉಪನ್ಯಾಸಗಳಿರುತ್ತವೆ. ವಿಶೇಷವಾಗಿ ಕಂಥೆಯನ್ನು ತಯಾರಿಸುತ್ತಿರುವ ಶಿರಗುಪ್ಪಿಯ ಶರಣ. ಬಸವರಾಜಪ್ಪ ಮೆಣಸಿನ ಕಾಯಿ ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಷಯಗಳನ್ನು ಪ್ರತಿಪಾದಿಸಲಿದ್ದಾರೆ. ಈ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳಲು ವಿನಂತಿ.

ತ್ಯಾಗ ಮೆರೆಸಿ ಶೋಕ ಮರೆಸಿ ಜ್ಞಾನ ಧರಿಸಿ ಮೌಢ್ಯತೆಯ ತೊಲಗಿಸಿ
ಹಸನಾದ ಕಾರ್ಯಗೈದು , ಜ್ಞಾನ ಸುಧೆಯ ಜಗಕಿತ್ತು
ಜನ ಮನದ ಕೊಳೆಯ ಕಳೆದು ನಡೆದಿಹರು ಬಸವಾತ್ಮಜೆ
ಲೀಲಾ ವಿಶೇಷ ಲಿಂಗದೇವನ ದಿವ್ಯ ತೇಜದಲ್ಲಿ

- ಮಾತೆ ಜ್ಞಾನೇಶ್ವರಿ , ಬಸವ ಮಂಟಪ
ಬೆಂಗಳೂರು

ಆನು ದೇವಾ.... ಮುಟ್ಟುಗೋಲಿಗೆ ಎಲ್ಲಾ ರೀತಿಯಿಂದಲೂ ಅರ್ಹವಾಗಿದೆ.

- ಮಾತಾಜಿ

ಬಂಜಗೆರೆ ಜಯಪ್ರಕಾಶರು ಪತ್ರಕರ್ತರ ಸಂಘದ ಸಂಯುಕ್ತ ಆಶ್ರಯದಲ್ಲಿ ಕನ್ನಡ ಭವನದಲ್ಲಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡು "ಆನು ದೇವಾ" ಪುಸ್ತಕದಲ್ಲಿ ತಪ್ಪುಗಳಿದ್ದರೆ ಮುಟ್ಟುಗೋಲು ಹಾಕಲಿ ಎಂದು ಸವಾಲು ಹಾಕಿದ್ದಾರೆ. ಸಂಭಾವ್ಯ ಸತ್ಯ ಎಂಬ ನೆಪದಲ್ಲಿ ಒಂದಲ್ಲ ಎರಡಲ್ಲ ಹತ್ತಾರು ತಪ್ಪುಗಳಿವೆ. ಬಹಾಳಷ್ಟು ಉಲ್ಲೇಖಿಸುವುದಿರಲಿ ಬಸವಣ್ಣನವರು ಜನ್ಮತಃ ಬ್ರಾಹ್ಮಣರಲ್ಲ ಮಾದಿಗರು ಎಂಬುದು, ಅವರ ತಂದೆ ಮಾದಿರಾಜ ಎಂಬುದಕ್ಕೂ ಮಾದರು ಎಂಬುದಕ್ಕೂ ಸಂಬಂಧ ಕಲ್ಪಿಸಿರುವುದು, ಬಸವ ಎನ್ನುವ ಹೆಸರನ್ನು ಕೆಳವರ್ಗದ ಜನ ಹೆಚ್ಚಾಗಿ ಇಟ್ಟುಕೊಳ್ಳುತ್ತಾರೆ ಎಂದು ಊಹಿಸುವ ಅಸಂಬದ್ಧತೆ; ಇಂಥ ಹತ್ತಾರು ಕಾರಣಗಳು ಇತಿಹಾಸಕ್ಕೆ ಅಪಚಾರ ಮಾಡುತ್ತಿವೆ.

ಬಸವಣ್ಣನವರ ಪೂರ್ವಜರು ಆಂಧ್ರ ಪ್ರದೇಶದಿಂದ ವಲಸೆ ಬಂದು ಇಂಗಳೇಶ್ವರ, ಬಾಗೇವಾಡಿ ಮುಂತಾದ ಕಡೆ ನೆಲೆಸಿದರು. ಆಗಮಿಕ ಶೈವ ಪಾಶುಪತ ಮಾರ್ಗಾನುಯಾಯಿಗಳಾದ ಈ ಜನಾಂಗ ಕಮ್ಮೆ ಬ್ರಾಹ್ಮಣರು ಎನಿಸಿಕೊಳ್ಳುತ್ತಾರೆ. ಗುಂಟೂರು ಜಿಲ್ಲೆಯ ಭಾಗವು ಐತಿಹಾಸಿಕವಾಗಿ ಕಮ್ಮೆ ನಾಡು ಎಂದೇ ಪ್ರಸಿದ್ಧವಾಗಿದೆ. ಆ ಜನಾಂಗದಲ್ಲಿ ಇಂದಿಗೂ ಮನೆಯಲ್ಲಿ ಹುಟ್ಟುವ ಮೊದಲನೆ ಮಗುವಿಗೆ **ಬಸವ** ಎಂದು ನಾಮಕರಣ ಮಾಡುವ ಸಂಪ್ರದಾಯವಿದೆ. ಮಾದಿರಾಜ, ಬಲದೇವ, ನಾಗಲಾಂಬಿಕೆ, ಗಂಗಾಂಬಿಕೆ, ಮಾದಲಾಂಬಿಕೆ ಮುಂತಾದ ಹೆಸರು ಬಹಳಷ್ಟು ಜನಪ್ರಿಯ. ಹೀಗಾಗಿ ಮಾದಿರಾಜ-ಮಾದಲಾಂಬಿಕೆ ನಂದಿ ವ್ರತದ ಫಲವಾಗಿ ಜನಿಸಿದ ಬಸವನಿಗೆ ವೃಷಭದ ದ್ರಾವಿಡ ಶಬ್ದ ಬಸವ ಎಂದು ಹೆಸರಿಟ್ಟಿದ್ದಾರೆ. ಎಲ್ಲಾ ಜನಾಂಗದವರ ಮುಖ್ಯವಾಗಿ ಅತ್ಯಂತ ಕೆಳಸ್ತರದವರಾಗಿ ಶೋಷಣೆಗೊಳಗಾಗಿದ್ದ ದಲಿತರ ಉದ್ಧಾರಕ್ಕಾಗಿ ಬಸವಣ್ಣನವರು ಶ್ರಮಿಸಿದ ಕಾರಣ ದಲಿತರಾದಿಯಾಗಿ ಎಲ್ಲರೂ ಅಭಿಮಾನದಿಂದ ಬಸವಣ್ಣನವರ ಹೆಸರನ್ನು ಇಟ್ಟುಕೊಳ್ಳುತ್ತಾರೆ. ಇಂದಿಗೂ ಗುರು ಬಸವಣ್ಣನವರ ವಂಶಸ್ಥರು ಇರುವುದಲ್ಲದೇ ಹೈದರಾಬಾದಿನ ಖ್ಯಾತ ವಿದ್ವಾಂಸ ಮತ್ತು ಲೇಖಕರಾದ ಡಾ.ಮುದಿಗೊಂಡ ಶಿವಪ್ರಸಾದರು ಕಲ್ಯಾಣ ವಿಜಯಂ ಎಂಬ ಪುಸ್ತಕ ಬರೆದು, ಅದು ಪತ್ಯವೂ ಆಗಿದ್ದು ,ಅವರು ಬಸವಣ್ಣನವರ ಜನಾಂಗದ ಬ್ರಾಹ್ಮಣರು ತಾವು ಎಂದು ಅಭಿಪ್ರಾಯ ಪಡುತ್ತಾರೆ.

ಸಂಶೋಧಕ ಖಚಿತವಾಗಿ ಆಧಾರಗಳನ್ನು ಮುಂದಿಸಿ ಸತ್ಯವನ್ನು ಸಿದ್ಧಪಡಿಸಬೇಕೆ ವಿನಾ ಬಾವಿಕಟ್ಟೆಯ ಮೇಲೆ ಆಡಿಕೊಳ್ಳುವ ಮಹಿಳೆಯರಂತೆ ಅನುಮಾನಿತ ಸತ್ಯ ಎಂದು ಊಹಾ ಪೋಹಾ ಮಾಡಿ ಮಹಾತ್ಮರ ಚರಿತ್ರೆ ಮತ್ತು ಚಾರಿತ್ರ್ಯ ಎರಡಕ್ಕೂ ಕಳಂಕ ತರುವುದು ಸಂಶೋಧನೆ ಯಾಗದು. ವಚನದ ವಾಕ್ಯಗಳನ್ನು ಅಪಾರ್ಥ ಮಾಡಿ ಬಸವಣ್ಣನವರ ತತ್ವ ನಂಬಿಕೆ ಸಿದ್ಧಾಂತಗಳಿಗೆ ಅಪಚಾರ ಮಾಡಿರುವ ಆನು ದೇವಾ ಪುಸ್ತಕ ನಿಷೇಧಗೊಳ್ಳಲು ಎಲ್ಲಾ ಅರ್ಹತೆಗಳನ್ನು ಪಡೆದಿದೆ. ಇದನ್ನು ಮನವರಿಕೆ ಮಾಡಿಕೊಳ್ಳದೆ ಯಾರೋ ಜನಪ್ರಿಯರಾಗಲು ಚಳುವಳಿ ಮಾಡುತ್ತಿದ್ದಾರೆಂದು ಬಂಜಗೆರೆಯವರು ಆರೋಪಿಸಿರುವ ಅಕ್ಷಮ್ಯ. ಈ ವರೆಗೂ ಎಷ್ಟೋ ಪುಸ್ತಕಗಳಿಗೆ ವಿರೋಧ ವ್ಯಕ್ತವಾಗಿದೆ; ಆದರೆ ಬಂಜಗೆರೆಯವರ ಆನು ದೇವಾಕ್ಕೆ ಆಗಿರುವ ಪ್ರತಿಭಟನೆಯ ತೀವ್ರತೆ ಮತ್ತು ವ್ಯಾಪಕತೆ ಇನ್ನಾದರೂ ಅವರ ಮತ್ತು ಸರಕಾರದ ಕಣ್ಣು ತೆರೆಸುವದೇನೋ ನೋಡೋಣ.

- ಮಾತಾಜಿ.

ಎನ್ನಲ್ಲಿ ಭಕ್ತಿಯ ಪುಳಕಂಗಳನ್ನು ಹೊರಹೊಮ್ಮಿಸಿದ ಶರಣರು,
ಮನದಲ್ಲಿ ಸುಚಿತ್ತವನ್ನು ತುಂಬಿದ ಶರಣರು,
ಭಾವದಲ್ಲಿ ಬೆಳಕಾಗಿ ಪರಮನ ತೋರಿದ ಶರಣರು,
ಇಂತಪ್ಪ ಶ್ರೀಲಿಂಗತಂದೆಯ ಶರಣರ ಪಾದಕ್ಕೆ ಅನಂತ ಶರಣಾರ್ಥಿ.

-ಶರಣೆ ಸುಮಾ ಸುನೀಲ, ಭದ್ರಾವತಿ

ವಚನ ದುಂದುಭಿ - 5

ನಿರ್ವಹಣೆ -ಸಚ್ಚಿದಾನಂದ

ಕಲ್ಯಾಣ ಕಿರಣದಲ್ಲಿ ವಚನ ದುಂದುಭಿ ಎನ್ನುವ ಅಂಕಣವೊಂದನ್ನು ಪ್ರಾರಂಭಿಸಲಾಗಿದ್ದು, ಇದು ಇನ್ನು ಮುಂದೆ ಪ್ರತಿ ತಿಂಗಳೂ ಪ್ರಕಟಗೊಳ್ಳುವುದು. ಪ್ರತಿ ವರ್ಷ ಕಲ್ಯಾಣ ಪರ್ವ ಮತ್ತು ಶರಣ ಮೇಳದಲ್ಲಿ ನಡೆಯುವ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಈ ಅಂಕಣದಲ್ಲಿ ಪ್ರಕಟವಾದ ಪ್ರಶ್ನೆಗಳನ್ನು ಕೇಳಲಾಗುವುದು. ಮತ್ತು ಈ ಪ್ರಶ್ನೆಗಳಿಗೆ ಸರಿ ಉತ್ತರಗಳನ್ನು ತಾವು ಅಂಚೆ ಕಾರ್ಡ್‌ನಲ್ಲಿ ಬರೆದು, ವಚನ ದುಂದುಭಿ ವಿಭಾಗ ಎಂದು ಕಾಣಿಸಿ ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳುಹಿಸಬೇಕು. ಸರಿಯುತ್ತರ ಕೊಟ್ಟವರ ಹೆಸರುಗಳನ್ನು ಕಲ್ಯಾಣ ಕಿರಣ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಶ್ನೆಗಳು

1. ಕರ ಸಂಜಾತ ಎಂದರೇನು?
2. ಲಿಂಗಾಯತ ಧರ್ಮೀಯರ ಪವಿತ್ರ ಮಾಸ ಯಾವುದು?
3. ಕಣ್ಣಿನಲ್ಲಿ ಯಾವ ಲಿಂಗ ಅಳವಡಬೇಕು ?
4. ಜೀವಿಸುವ ಜೀವನಕ್ಕೆ ಯಾವುದು ಶೃಂಗಾರ ?
5. ಮಹಾದೇವಿಯಕ್ಕನ ಪುರಾಣ ಬರೆದವರಾರು?
6. "**ವಚನ ಸಾಹಿತ್ಯ ಲಿಂಗಾಯತ ಧರ್ಮದ ಜೀವಾಳ, ಇದರ ರಕ್ಷಣೆಯೇ ನನ್ನ ಪ್ರಾಣ ರಕ್ಷಣೆ**"ಎಂದು ಯಾರು ಯಾರಿಗೆ ಹೇಳಿದರು?
7. ಗುರು ಬಸವಣ್ಣನವರಿರದ ಕಲ್ಯಾಣಕ್ಕೆ ನಾನು ಬರಲಾರೆ ಎಂದು ಹೇಳಿದವರಾರು?
8. "ಕುಲದೊಳಗೆ ಹುಟ್ಟಿ ಕುಲವ ಬೆರೆಸದೆ ತನ್ನ ನಿಲುವ ಬಲಿದಿಪ್ಪವರಿನ್ನಾರು ಹೇಳಾ" ಎಂದು ಗುರು ಬಸವಣ್ಣನವರ ಬಗ್ಗೆ ಅಲ್ಲಮ ಪ್ರಭುದೇವರು ಹೇಳುವ ಮಾತಿನ ಅರ್ಥವೇನು?
9. "ಅರಿವರೆತು ಮರಹುಗೆಟ್ಟು ತನ್ನಲ್ಲಿ ತಾನು ಸನ್ನಿಹಿತರಾದವರಿಗೆ ದುಃಖಿಸುವರೆ ಹೇಳಾ ಶೋಕಿಸುವರೆ ಹೇಳಾ?" ಎಂದು ಯಾರು ಯಾರಿಗೆ ಉಪದೇಶ ಮಾಡುತ್ತಾರೆ?
10. ಅಕ್ಕ ಮಹಾದೇವಿ ತಾಯಿ ಯಾವ ಹುಣ್ಣಿಮೆಯಂದು ಹುಟ್ಟಿದರು?
11. ಭ್ರೂಮಧ್ಯದಲ್ಲಿ ಇರುವ ಚಕ್ರ ಯಾವುದು?
12. ಅಂತಃಕರಣ ಚತುಷ್ಟಯಗಳಲ್ಲಿ ಉಗ್ರಾಣದಂತೆ ಕೆಲಸ ಮಾಡುವುದು ಯಾವುದು?
13. ಬಸವ ಬಸವಾ ಎಂದು ಭಸಿತವಂ ಧರಿಸಿದರೆ...ಎನ್ನುವ ಗೀತೆಯನ್ನು ರಚಿಸಿದವರು ಯಾರು?
14. 16ನೇ ಶತಮಾನದಲ್ಲಿ ಮೈಸೂರು ಜಿಲ್ಲೆ ಹಾಗು ತಮಿಳು ನಾಡಿನಲ್ಲಿ ಗುಡ್ಡಗಾಡು ಜನರಿಗೆ ದೀಕ್ಷೆ ನೀಡಿ ಲಿಂಗಾಯತ ಧರ್ಮ ಬೆಳೆಸಿದವರಾರು?
15. ದೇವರ ಗುಣ ತ್ರಯಗಳು ಯಾವುವು?
16. ಅಷ್ಟವಿಧಾರ್ಚನೆಗಳು ಯಾವುವು ?
17. ಅಂತರಂಗದ ಅಷ್ಟಾವರಣಗಳು ಯಾವುವು?
18. ವೀರ ಗಣಾಚಾರಿ ಎನ್ನುವ ನಾಮ ವಿಶೇಷಣ ಯಾರಿಗೆ ಅನ್ವಯಿಸುತ್ತದೆ?
19. ಬಸವ ಯುಗ ನಿರ್ಮಾಪಕರೆಂದು ಯಾರನ್ನು ಕರೆಯುತ್ತಾರೆ?
20. ಬಿಬ್ಬಿ ಬಾಚಯ್ಯನವರ ವಚನಾಂಕಿತ ಯಾವುದು?
21. ಅಜಗಣ್ಣ ತಂದೆಯ ವಚನಾಂಕಿತ ಯಾವುದು?
22. ಅಭಿನವ ಅಕ್ಕಮಹಾದೇವಿ ಎಂದು ಯಾರನ್ನು ಕರೆಯುತ್ತಾರೆ ?
23. ಫ.ಗು. ಹಳಕಟ್ಟಿಯವರು ಪ್ರಕಟಿಸಿದ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಮೊಟ್ಟ ಮೊದಲ ಪುಸ್ತಕ ಯಾವುದು?
24. ವಚನಗಳ ಸಂಶೋಧನೆಗಿಂತ ಮುಂಚೆ ಹಳಕಟ್ಟಿಯರು ಮಾಡುತ್ತಿದ್ದ ಕಾಯಕ ಯಾವುದು?
25. ಫ.ಗು. ಹಳಕಟ್ಟಿಯರು ಹುಟ್ಟಿದ ವರ್ಷ ಮತ್ತು ದಿನಾಂಕ ಯಾವುದು?

ವಚನ ದುಂದುಭಿ-4ರ ಸರಿ ಉತ್ತರಗಳು

1. ಕಂಬಳಿ ನಾಗಿದೇವರ ಮನೆಯಲ್ಲಿ
2. ಗೊಗ್ಗಯ್ಯ
3. ವಿಭೂತಿಯೇ ಒಳಗುಂದದ ಅರಿಶಿನ
4. ಬುಟ್ಟಿ ಹೆಣೆಯುವ ಕಾಯಕ ಮಾಡುತ್ತಿದ್ದರು.
5. ಶರಣ. ತೆಲುಗು ಜೊಮ್ಮಯ್ಯ
6. ಉಳವಿಯ ಮಹಾಮನೆಯ ಹತ್ತಿರದಲ್ಲಿದೆ
7. ಶರಣ. ಅಂಬಿಗರ ಚೌಡಯ್ಯನವರಿಗೆ ಅನ್ವಯಿಸುತ್ತದೆ.
8. ಶರಣ. ಸುಜ್ಞಾನಿ ದೇವ
9. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ
10. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಜನನವಾದ ದಿನ
11. ಕೃಷ್ಣಾ ನದಿಯ ದಕ್ಷಿಣ ಭಾಗಕ್ಕೆ ಜನರು ಸೇರುತ್ತಾರೆ ಎಂದು ಅರ್ಥ
12. ಸ್ವರ ವಚನಗಳು
13. ಬಸವ ಕಲ್ಯಾಣಕ್ಕೆ ಬರುವಾಗ ದೇವವಿರಹಿಯಾಗಿ ಹಾಡಿದ್ದಾರೆ
14. ಹರಿಹರ ಮಹಾಕವಿ
15. ಪರಮ ಪೂಜ್ಯ ಮಾತಾಜಿ
16. ಧರ್ಮಗುರು ಬಸವಣ್ಣನವರು
17. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಕರುಣೋದಕ, ಕರುಣ ಪ್ರಸಾದ
18. ಕೋಲ ತುದಿಯ ಕೋಡಗನಂತೆ ನೇಣ ತುದಿಯ ಬೊಂಬೆಯಂತೆ ಎನ್ನುವ ವಚನದಲ್ಲಿ
19. ಶರಣ.ನನ್ನಯ್ಯ
20. ಅಕ್ಕಮಹಾದೇವಿ ಅಲ್ಲಮ ಪ್ರಭುದೇವರಿಗೆ
21. ಗುರುವಿನಿಂದ ಇಷ್ಟಲಿಂಗ ದೀಕ್ಷೆ ಪಡೆದರೆ ಮಾತ್ರ ಲಿಂಗಾಯತರಾಗುವರು
22. ಜಗದೇವ ಮಲ್ಲ ಬೊಮ್ಮಣ್ಣನವರು
23. ಕರ್ಮಕಾಂಡ, ಭಕ್ತಿ ಕಾಂಡ, ಜ್ಞಾನ ಕಾಂಡ
24. ಜ್ಞಾನದ ಉತ್ತಮ ಮಟ್ಟಕ್ಕೆ ಏರಿದವರು
25. ಉಳವಿಯ ಮಹಾಮನೆಯ ಗವಿಯಲ್ಲಿ

ವಚನ ದುಂದುಭಿ - 4ರ ಸರಿಯುತ್ತರ ನೀಡಿದವರು

1. ರೇಖಾ ಗಂಗಯ್ಯ, ಬೆಂಗಳೂರು
2. ಮಹಾದೇವ ಚನ್ನಪ್ಪ ಐಗಳಿ
3. ವಿಜಯಾ ನಂಜುಂಡಪ್ಪ, ದಾವಣಗೆರೆ
4. ಶಾಂತಮ್ಮ , ಭದ್ರಾವತಿ.
5. ಎಚ್. ಚಂದ್ರಿಕಾ, ಭದ್ರಾವತಿ
6. ಶಾಂತಮ್ಮ ಲಿಂಗಾಯತ್
7. ಎಸ್.ಎನ್.ನಂದರಗಿ,ಧಾರವಾಡ
8. ರತ್ನಮ್ಮ ಜಯಣ್ಣ, ಮೈಸೂರು
9. ನಿರ್ಮಲಾ ಜಯದೇವ
10. ಬಸವ ಚಂದ್ರಿಕೆ, ಬೆಂಗಳೂರು.

ದಯವಿಟ್ಟು ಉತ್ತರಗಳನ್ನು ಆಗಸ್ಟ್ 5ನೆಯ ತಾರೀಖಿನೊಳಗೆ ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳಿಸಬೇಕು.

"ಆನು ದೇವಾ.... ಮುಟ್ಟುಗೋಲಿಗೆ ಸೋಮವಾರದ ಒಳಗೆ ಕ್ರಮ : ಸಿ.ಎಂ. ವಾಗ್ದಾನ

ಬೆಂಗಳೂರು :- ಬಂಜಗೆರೆ ಜಯಪ್ರಕಾಶ ಅವರು ಬರೆದಿರುವ ವಿವಾದಿತ ಕೃತಿ ಆನು ದೇವಾ ಹೊರಗಣವನು ಪುಸ್ತಕದಿಂದ ಶ್ರೀ ಬಸವಣ್ಣನವರಿಗೆ ಮಾತ್ರವಲ್ಲದೇ ಅನೇಕ ಮಹಾತ್ಮರ ಚಾರಿತ್ರ್ಯಕ್ಕೆ ಕಳಂಕ ಹಚ್ಚಿದಂತೆ ಆಗಿದೆ. ಅದನ್ನು ಓದಿ ತಮಗೂ ಅತ್ಯಂತ ನೋವಾಗಿದೆ. ಮಾತ್ರವಲ್ಲ ಕಾನೂನು ಮತ್ತು ಸುವ್ಯವಸ್ಥೆಗೆ ಚ್ಯುತಿ ತರುವ ಕಾರ್ಯವನ್ನು ಜಯಪ್ರಕಾಶ್ ಮಾಡಿದ್ದಾರೆ. ಕಾನೂನು ಇಲಾಖೆಯ ತಜ್ಞರೊಂದಿಗೆ ಚರ್ಚಿಸಿ ಸೋಮವಾರದೊಳಗೆ ಈ ವಿವಾದಿತ ಕೃತಿಯನ್ನು ಮುಟ್ಟುಗೋಲು ಹಾಕುವ ಕ್ರಮ ಕೈಗೊಳ್ಳಲಾಗುವುದು "ಇದೊಂದು ಕರ್ನಾಟಕಕ್ಕೆ ಕಳಂಕ ತರುವ ಕೃತಿಯಾಗಿದೆ." ಎಂದು ರಾಜ್ಯದ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಭರವಸೆ ನೀಡಿದರು.

ಅವರು ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಜಗದ್ಗುರು ಪೂಜ್ಯ ಶ್ರೀ ಮಾತೆ ಮಹಾದೇವಿ ಅವರ ನೇತೃತ್ವದಲ್ಲಿ ವಿವಾದಿತ ಕೃತಿಯ ರದ್ದತಿಗಾಗಿ ಒತ್ತಾಯಿಸಿ ತಮ್ಮ ಗೃಹ ಕಛೇರಿಯ ಮುಂದೆ ಸಾವಿರಾರು ಶರಣ- ಶರಣೆಯರು ಕೈಗೊಂಡ ಧರಣೆ ಸತ್ಯಾಗ್ರಹದ ಸಂದರ್ಭದಲ್ಲಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮುಖ್ಯ ಮಂತ್ರಿಗಳು ಮಾತನಾಡುತ್ತಿದ್ದರು. ಸಾಹಿತಿಗೂ ಸಹ ಇಂಥ ಕೀಳು ಮಟ್ಟದ ಕೃತಿಯ ಮೂಲಕ ಬಹು ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸಿದ್ದಕ್ಕಾಗಿ ಕಾನೂನು ಪ್ರಕಾರ ಶಿಕ್ಷೆ ವಿಧಿಸಬೇಕೆಂದು ಸತ್ಯಾಗ್ರಹಿಗಳು ಆಗ್ರಹಿಸಿದಾಗ ಆ ಬಗ್ಗೆ ಸಹ ಗಂಭೀರವಾಗಿ ಪರಿಶೀಲಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ದಿ.5-7-2007ರಂದು ಬೆಳಿಗ್ಗೆ 11-00ಘಂಟೆಗೆ ನೆಹರು ಪಾರ್ಕ್‌ನಿಂದ ಪ್ರತಿಭಟನಾ ರ‍್ಯಾಲಿ ಬೃಹತ್ ಪ್ರಮಾಣದಲ್ಲಿ ಆರಂಭವಾಗಿ ಗೃಹ ಸಚಿವ ಎಂ.ಪಿ.ಪ್ರಕಾಶ ನಿವಾಸದೆದುರಿಗೆ ಒಂದು ಗಂಟೆ ಕಾಲ ಧರಣೆ ನಡೆಸಿದ ಸಾವಿರಾರು ಸತ್ಯಾಗ್ರಹಿಗಳು ಮೆರವಣಿಗೆಯ ಮೂಲಕ ಬಂಜಗೆರೆ ಮತ್ತು ಎಂ.ಪಿ.ಪ್ರಕಾಶರಿಗೆ ಧಿಕ್ಕಾರ ಕೂಗುತ್ತ ಮುಖ್ಯ ಮಂತ್ರಿಯ ನಿವಾಸದ ಕಡೆಗೆ ಸಾಗಿದರು.

ನೆಹರು ಪಾರ್ಕದಲ್ಲಿ ಹಾಕಲಾಗಿದ್ದ ಭವ್ಯ ಪೆಂಡಾಲ್‌ನಲ್ಲಿ ಶ್ರೀ ಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಶುಭಾರಂಭಗೊಂಡ ಪ್ರತಿಭಟನಾ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಕೇವಲ ಪೂಜೆ, ಪ್ರಾರ್ಥನೆಗಳನ್ನು ಮಾಡುತ್ತಾ ಮಠಗಳಲ್ಲಿ ಕೂಡುವುದರಿಂದ ಸಂಸ್ಕೃತಿ ರಕ್ಷಣೆ ಸಾಧ್ಯವಿಲ್ಲ. ಧರ್ಮ, ಸಂಸ್ಕೃತಿಗೆ ಚ್ಯುತಿ ಬಂದಾಗ ಖಡ್ಗ ಹಿಡಿದು ಹೋರಾಡಲೂ ಸಿದ್ಧರಾಗಬೇಕಾಗಿದೆ. ಸಂದರ್ಭ ಬಂದರೆ ಬಸವ ಭಕ್ತರಿಗೆ ಈಗಿನಿಂದಲೇ ಆ ತರಬೇತಿಯನ್ನು ಸಹ ನೀಡಲಾಗುವುದೆಂದೂ ಪೂಜ್ಯ ಮಾತಾಜಿಯವರು ಘೋಷಿಸಿದರಲ್ಲದೆ ಬಂಜಗೆರೆ ಜಯಪ್ರಕಾಶ್ ಬರೆದಿರುವ "ಆನು ದೇವಾ ಹೊರಗಣವನು" ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವವರೆಗೂ ನಮ್ಮ ರಾಷ್ಟ್ರೀಯ ಬಸವ ದಳದ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ರಾಷ್ಟ್ರೀಯ ಬಸವ ದಳದ ಪ್ರಧಾನ ಸಂಚಾಲಕ ನವದೆಹಲಿ ಬಸವ ಮಂಟಪದ ಪೂಜ್ಯ ಸದ್ಗುರು ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಕೆಲವು ಸಾಹಿತಿಗಳು ಈ ಕೃತಿಯನ್ನು ಸಮರ್ಥಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಯಾವುದೇ ಸಂದರ್ಭದಲ್ಲೂ ಹೋರಾಟದಿಂದ ಹಿಂಜರಿಯುವ ಪ್ರಶ್ನೆಯೇ ಇಲ್ಲ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಪತ್ರ ಬರೆದು ಪ್ರಧಾನ ಮಂತ್ರಿಗಳ ಗಮನಕ್ಕೆ ತರಲಾಗಿದೆ. ಕೂಡಲೇ ಕರ್ನಾಟಕ ಸರ್ಕಾರವು ಬಂಜಗೆರೆಯ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿದರು.

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಭೀಮಣ್ಣ ಖಂಡ್ರೆ ಮಾತನಾಡಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಶಕ್ತಿ ಅದ್ಭುತವಾದದ್ದು. ಅವರ ನೇತೃತ್ವದಲ್ಲಿ ಹೋರಾಟ ಮಾಡಲು ನಾವೆಲ್ಲ ಸಿದ್ಧರಾಗಿದ್ದೇವೆ. ಸರ್ಕಾರ ಒಂದು ವೇಳೆ ಕೃತಿ ಮುಟ್ಟುಗೋಲು ಹಾಕದಿದ್ದರೆ ಇದೇ ತಿಂಗಳು 25ರಂದು ವಿಧಾನ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಪ್ರಕಟಿಸಿದರು.

ಅಖಿಲ ಭಾರತ ವೀರಶೈವ ಮಹಾಸಭೆಯ ಉಪಾಧ್ಯಕ್ಷ ಶ್ರೀ ಚಂದ್ರಕಾಂತ್ ಬೆಲ್ಲದ್ ಮಾತನಾಡಿ "ಮಾತಾಜಿಯವರ ಕರೆಯ ಮೇರೆಗೆ ಸಹಸ್ರಾರು ಸಂಖ್ಯೆಯಲ್ಲಿ ಶರಣ-ಶರಣೆಯರು ಸಮಾವೇಶಗೊಂಡಿರುವುದು ಸಾಮಾನ್ಯವಾದ ಮಾತಲ್ಲ. ಮಾತಾಜಿಯವರ ಜೊತೆಯಲ್ಲಿ ಸೇರಿ ಹೋರಾಟ ಮಾಡಲು ನಾವೆಲ್ಲಾ ಈಗ ಬದ್ಧರಾಗಿದ್ದೇವೆ" ಎಂದರು.

ರಾಷ್ಟ್ರೀಯ ಹಿಂದೂ ಸೇನಾ ರಾಜ್ಯಾಧ್ಯಕ್ಷ ಶ್ರೀ ಪ್ರಮೋದ ಮುತಾಲಿಕ್ ಮಾತನಾಡಿ "ಧರ್ಮ, ರಾಷ್ಟ್ರ ಮತ್ತು ಸಂಸ್ಕೃತಿಗೆ ಧಕ್ಕೆ ತರುವಂಥ ಕಾರ್ಯ ಎಲ್ಲಿಯೇ ನಡೆದರೂ ಅಲ್ಲಿ ಅನ್ಯಾಯದ ವಿರುದ್ಧ ಹೋರಾಡಲು ತಾವು ಸದಾ ಸಿದ್ಧ. ಸಮಾನತೆಯ ತತ್ವ ಸಾರಿದ ರಾಷ್ಟ್ರದ ಮಹಾಪುರುಷ ಗುರು ಬಸವಣ್ಣನವರ ಬಗ್ಗೆ ಅವಹೇಳನಕಾರಿಯಾಗಿ ಬರೆಯಲಾದ ಈ ಕೃತಿಯನ್ನು ಕೂಡಲೇ ಮುಟ್ಟುಗೋಲು ಹಾಕಬೇಕು" ಎಂದು ಸರ್ಕಾರವನ್ನು ಒತ್ತಾಯಿಸಿದರು.

ಪ್ರಪ್ರಥಮವಾಗಿ ಪ್ರಾಸ್ತಾವಿಕವಾಗಿ ಮಾತನಾಡಿದ ವಿಶ್ವ ಬಸವ ಧರ್ಮ ಮಹಾಸಭೆಯ ಪ್ರಧಾನ ಸಂಚಾಲಕರಾದ ದಯಾನಂದ ಸ್ವಾಮೀಜಿಯವರು ಮಾತನಾಡಿ ಈಗಾಗಲೇ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಲು ಆಗ್ರಹಿಸಿ ಮನವಿ ಪತ್ರ ಸಲ್ಲಿಸಲಾಗಿದೆ. ಮುಖ್ಯಮಂತ್ರಿಗಳು ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕು; ಇಲ್ಲದಿದ್ದಲ್ಲಿ ಹಲವಾರು ಸಂಘಟನೆಗಳು ಮತ್ತು ಮಠಾಧೀಶರ ನೇತೃತ್ವದಲ್ಲಿ ತೀವ್ರವಾಗಿ ಹೋರಾಡುವುದಾಗಿ ಎಚ್ಚರಿಸಿದರು.

ಸುಮಂಗಲಿ ಸೇವಾಶ್ರಮದ ಸುಶೀಲಮ್ಮ, ಹಿರಿಯ ವಕೀಲರಾದ ಆರ್.ಎಚ್. ಚಂದನಗೌಡರು, ಸಾಹಿತಿ ಎಚ್.ಚಂದ್ರಶೇಖರ್, ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷ ಕೆ.ವೀರಣ್ಣ ಲಿಂಗಾಯತ್, ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಶರಣ.ಎಸ್.ಪುಟ್ಟರುದ್ರಪ್ಪ, ರಾಷ್ಟ್ರೀಯ ಬಸವ ದಳದ ದೇವಿಕಾ ಶರಣಪ್ಪ, ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ಸೇರಿದಂತೆ, ಆಂಧ್ರ, ಮಹಾರಾಷ್ಟ್ರ ತಮಿಳುನಾಡು ಹಾಗೂ ಕರ್ನಾಟಕದ ಎಲ್ಲ ಜಿಲ್ಲೆಗಳ ಶರಣ -ಶರಣೆಯರು ಪಾಲ್ಗೊಂಡಿದ್ದರು.

ಬೃಹತ್ ಮೆರವಣಿಗೆ


ನೆಹರು ಪಾರ್ಕ್‌ದಿಂದ ಬೃಹತ್ ಪ್ರಮಾಣದ ಮೆರವಣಿಗೆ ಗೃಹ ಸಚಿವ ಎಂ.ಪಿ.ಪ್ರಕಾಶ್ ಅವರ ಮನೆಯವರೆಗೂ ಸಾಗಿ ಅಲ್ಲಿ ಸತ್ಯಾಗ್ರಹ ನಡೆಸಿ ನಂತರ ಮುಖ್ಯ ಮಂತ್ರಿಯವರ ಗೃಹ ಕಛೇರಿಯವರೆಗೂ ಸಾಗಿ ಬೃಹತ್ ಸತ್ಯಾಗ್ರಹವಾಗಿ ಮಾರ್ಪಟ್ಟಿತ್ತು. 3ಗಂಟೆಯವರೆಗೂ ಸಾಗಿದ ಸತ್ಯಾಗ್ರಹ ಸ್ಥಳಕ್ಕೆ ಆಗಮಿಸಿದ ಮುಖ್ಯ ಮಂತ್ರಿಗಳು ಪೂಜ್ಯ ಮಾತಾಜಿಯವರಿಂದ ಮನವಿ ಸ್ವೀಕರಿಸಿ ನಂತರ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿ ನಂತರ ವಿಧಾನ ಸಭೆಯ ಅಧಿವೇಶನಕ್ಕೆ ತೆರಳಿದರು.

ಕಾಯಕವೇ ಕೈಲಾಸ : ನನ್ನ ಆಡಳಿತದ ಧ್ಯೇಯ – ಸಿ.ಎಂ.

ಬೆಂಗಳೂರು: ವಿಶ್ವಗುರು ಬಸವಣ್ಣನವರ ಕಾಯಕವೇ ಕೈಲಾಸ ಇದು ನನ್ನ ಆಡಳಿತದ ಧ್ಯೇಯ. ನಾನು ಅಧಿಕಾರ ಸ್ವೀಕರಿಸಿದ ದಿನವೇ ಈ ಪ್ರತಿಜ್ಞೆ ಸ್ವೀಕರಿಸಿದ್ದೇನೆ ಎಂದು ಮುಖ್ಯ ಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಹೇಳಿದರು.

ಅವರು ಅವರ ಮನೆಯ ಮುಂಭಾಗದಲ್ಲಿ ರಾಷ್ಟ್ರೀಯ ಬಸವ ದಳ ಕೇಂದ್ರ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಏರ್ಪಡಿಸಿದ್ದ ಆನು ದೇವಾ ಹೊರಗಣವನು ಕೃತಿ ಮುಟ್ಟುಗೋಲಿಗೆ ಆಗ್ರಹಿಸಿ ನಡೆದ ಪ್ರತಿಭಟನಾ ಸತ್ಯಾಗ್ರಹದಲ್ಲಿ ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದರು.

- ವರದಿ: ಕರಿಬಸಪ್ಪ ಕೋರಿಶೆಟ್ಟರ್
ನ್ಯಾಯವಾದಿ, ಧಾರವಾಡ



ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡುತ್ತಿರುವ ಪೂಜ್ಯ ಮಾತಾಜಿ



ಪ್ರತಿಭಟನಾ ರ್‍ಯಾಲಿಯಲ್ಲಿ ಶರಣ ಸಮೂಹದೊಂದಿಗೆ ಪೂಜ್ಯ ಮಾತಾಜಿ







ಮಾನ್ಯಮುಖ್ಯ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಬಸವ ರಕ್ಷೆ
ಹೊದ್ದಿಸುತ್ತಿರುವ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ



ಮುಟ್ಟುಗೋಲು ಹಾಕಲು ಪ್ರತಿಭಟಿಸುತ್ತಿರುವ ಪೂಜ್ಯ ಮಾತಾಜಿ,ಪ್ರಮೋದ ಮುತಾಲಿಕ್ ಮತ್ತು
ಶರಣ ಸಮೂಹ



"ಆನು ದೇವಾ......" ಮುಟ್ಟುಗೋಲು ಹಾಕಲು ಪ್ರತಿಭಟಿಸುತ್ತಿರುವ ಶರಣ ಸಮೂಹ.



CPMG/KA/BGW-50/2006-2008 WPP (W)-17 R.No.19980/70



ದಿ.5-7-2007ರಂದು ರಾಷ್ಟ್ರೀಯ ಬಸವ ದಳದಿಂದ ಪ್ರತಿಭಟನೆ ನಡೆದಾಗ ಮುಖ್ಯಮಂತ್ರಿಗಳು ಮನವಿ ಸ್ವೀಕರಿಸಲು ಬಂದಾಗ ಪೂಜ್ಯ ಮಾತಾಜಿ ಪುಸ್ತಕದ ಲೋಪದೋಷಗಳನ್ನು ವಿವರಿಸುತ್ತಿದ್ದಾರೆ



ಮುಖ್ಯ ಮಂತ್ರಿ ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು ಮಾತನಾಡಿ, ಆನು ದೇವಾ ಪುಸ್ತಕ ಕೆಲವು ವಾಕ್ಯಗಳು ತಂಬಾ ನೋವನ್ನು ಉಂಟು ಮಾಡಿದ್ದು ಬೇಗನೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.